International Journal of Kannada Research 2021; 7(4): 07-19

International Journal of Kannada Research
www.kannadajournal.com

ISSN: 2454–5813
IJKR 2021; 7(4): 07-19
© 2021 IJKR
www.kannadajournal.com
Received: 12-06-2021
Accepted: 06-08-2021

**ಶ್ರೀಮತಿ ವಿದ್ಯಾ ಸರಸ್ವತಿ**
ಸಂಶೋಧನಾ ವಿದ್ಯಾರ್ಥಿ,
ಎಸ್‌ವಿಪಿ ಕನ್ನಡ ಅಧ್ಯಯನ
ಸಂಸ್ಥೆ, ಮಂಗಳೂರು,
ಗಂಗೋತ್ರಿ, ಮಂಗಳೂರು,
ಕರ್ನಾಟಕ, ಭಾರತ

**Corresponding Author:**
**ಶ್ರೀಮತಿ ವಿದ್ಯಾ ಸರಸ್ವತಿ**
ಸಂಶೋಧನಾ ವಿದ್ಯಾರ್ಥಿ,
ಎಸ್‌ವಿಪಿ ಕನ್ನಡ ಅಧ್ಯಯನ
ಸಂಸ್ಥೆ, ಮಂಗಳೂರು,
ಗಂಗೋತ್ರಿ, ಮಂಗಳೂರು,
ಕರ್ನಾಟಕ, ಭಾರತ

# ಸಾರ ಅವರ 'ಸಹನಾ'ಕಾದಂಬರಿಯಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪ

**ಶ್ರೀಮತಿ ವಿದ್ಯಾ ಸರಸ್ವತಿ**

ಕನ್ನಡ ಸಾಹಿತ್ಯ ಪರಂಪರೆಯನ್ನು ಸ್ಥೂಲವಾಗಿ ಪರಿಶೀಲಿಸಿದಾಗ ಮೇಲ್ವರ್ಗದ ಸಂಸ್ಕೃತಿಯಿಂದ ಅನುಭವಗಳನ್ನು ಮೈಗೂಡಿಸಿಕೊಂಡಿರುವುದು ಕಂಡು ಬರುತ್ತದೆ. ಕಾಲಾನಂತರದಲ್ಲಿ ಪ್ರತಿಯೊಂದು ಸಮುದಾಯಗಳು ತಮ್ಮದೇ ಆದ ಅನುಭವಗಳನ್ನು, ಸಂಸ್ಕೃತಿಯ ಹೆಸರಲ್ಲಿ ದಾಖಲು ಗೊಳಿಸಲಾರಂಭಿಸಿದರು. ಹದಿನೆಂಟು-ಹತ್ತೊಂಬತ್ತನೆಯ ಶತಮಾನಕ್ಕಾಗುವಾಗ ಅನೇಕ ಮುಸ್ಲಿಂ ತತ್ತ್ವಪದಕಾರರೂ ಬೆಳೆದುಬಂದರು. ಅಂಥವರಲ್ಲಿ ಶಿಶುನಾಳ ಶರೀಫ,ಪಿಂಜಾರ ರಾಮದಾಸ, ಮೋಟನಹಳ್ಳಿ ಹಸನಾಬ, ಚೆನ್ನೂರ ಜಲಾಲಿ ಸಾಬಿ, ಕೊಳ್ಳುರ ಹಸನ ಸಾಬ, ಮಂಜರ್ಲಾ ಖಾದರ ಸಾಬ ಈ ಮೊದಲಾದವರು ಮುಖ್ಯವಾಗಿ ಕಾಣಿಸಿಕೊಳ್ಳುತ್ತಾರೆ. ಇವರು ಮುಸ್ಲಿಮ್ ಸಂವೇದನೆಗಳನ್ನು ಪ್ರತ್ಯೇಕವಾಗಿ ಮುಸ್ಲಿಮ್ ಸಮುದಾಯಗಳಲ್ಲಿ ಬಿಡಿಸಿ ತೋರಿಸಲಿಲ್ಲ. ಇವರು ಸಾಮಾನ್ಯ ಅನ್ಯ ಸಮುದಾಯದ, ಸಂಸ್ಕೃತಿಯ ಲೇಖಕರಂತೆ ಸಾಮಾನ್ಯವಾಗಿ ಲೋಕದ ಇರವನ್ನು ಕುರಿತು ಬರೆದವರು. ಮುಸ್ಲಿಮರಾಗಿ ಹುಟ್ಟಿದ್ದರೂ, ಮುಸ್ಲಿಮೇತರ ಸಂಸ್ಕೃತಿಯಲ್ಲಿ ಬೆಳೆದುದರಿಂದ ಇವರಿಗೆ ಮುಸ್ಲಿಂ ಸಂವೇದನೆಯೇ ಬರವಣಿಗೆಯ ಮುಖ್ಯ ಅಂಶ ವಾಗಲಿಲ್ಲ. ಆದರೆ ಇಪ್ಪತ್ತನೆಯ ಶತಮಾನದ ಉತ್ತರಾರ್ಧಕ್ಕಾಗುವಾಗ ಸಾಹಿತ್ಯದ ಪಂಥದಲ್ಲಿ ತೀವ್ರವಾದ ಬದಲಾವಣೆಗಳಾದವು. ಅದುವರೆಗೆ ಶಿಕ್ಷಣಕ್ಕೆ ತೆರೆದುಕೊಳ್ಳದ, ಶಿಕ್ಷಣದಿಂದ ವಂಚಿತರಾದ ಸಮುದಾಯವೊಂದು ಅಕ್ಷರ ಪ್ರಪಂಚಕ್ಕೆ ತೆರೆದುಕೊಂಡು, ತಮ್ಮ ಸಮುದಾಯದ ಒಳಗಿರುವ ಎಲ್ಲಾ ಹುಳುಕುಗಳನ್ನು ಸಮಾಜಕ್ಕೆ ತೋರಿಸುವ ಪ್ರಯತ್ನ ಮಾಡಿದೆ. ಇಂತಹ ಅಪರಿಚಿತ ಜಗತ್ತಿನ ಒಳನೋಟಗಳು ಮೊದಲು ಅಭಿವ್ಯಕ್ತಗೊಂಡಿರುವುದು ಬಂಡಾಯ ಚಳುವಳಿಯ ಮೂಲಕ ಮುಸ್ಲಿಂ ಲೇಖಕರಲ್ಲಿ. ೧೯೭೦ರ ಕಾಲಕ್ಕಾಗುವಾಗ ಕನ್ನಡಕ್ಕೆ ಅಪರಿಚಿತವಾಗಿದ್ದ ಮುಸ್ಲಿಂ ಸಮುದಾಯವೊಂದು ಮುಸ್ಲಿಂ ಸಂಸ್ಕೃತಿಯ ಅನೇಕ ಸಂವೇದನೆಗಳನ್ನು ಕನ್ನಡ ಸಾಹಿತ್ಯದಲ್ಲಿ ಕ್ರಿಯಾಶೀಲವಾಗಿ ಬರೆಯಲು ಆರಂಭಿಸಿದರು. ಇಂತಹ ಹಿಂದೂ-ಮುಸ್ಲಿಂ ಸಂಸ್ಕೃತಿಯ ಸಂವೇದನೆಗಳನ್ನು ಒಗ್ಗೂಡಿಸಿಕೊಂಡು ಇಂದು ಕನ್ನಡ ಸಾಹಿತ್ಯ ಶ್ರೀಮಂತವಾಗುತ್ತಾ ಬಂದಿದೆ.

ಮತ್ತು ತನ್ನ ಪರಿಧಿಯನ್ನು ವಿಸ್ತರಿಸಿ ಕೊಂಡಿದೆ. ಈ ಹಿನ್ನೆಲೆಯಲ್ಲಿ ದಲಿತರು, ಶೂದ್ರರು, ಮುಸ್ಲಿಮರು ಹೊಸಗನ್ನಡ ಸಾಹಿತ್ಯದ ಮಧ್ಯಭಾಗದಲ್ಲಿ ಶೋಷಣೆಯ ವಿರುದ್ಧ ಧ್ವನಿ ಎತ್ತಲು ಕಾರಣವಾಯಿತು. ತಮ್ಮ ತಮ್ಮ ಸಮುದಾಯದೊಳಗಿನ ಸಾಂಸ್ಕೃತಿಕ ಸಂವೇದನೆಗಳನ್ನು ಹೊರಜಗತ್ತಿಗೆ ಪರಿಚಯಿಸಲು ಸಾಧ್ಯವಾಯಿತು. ಇತರ ಸಮುದಾಯದವರು ಬೇರೆ ಸಂಸ್ಕೃತಿಯ ಕುರಿತು ಬರೆಯಬಹುದು ಆದರೆ ಅಲ್ಲಿ ಸಂಸ್ಕೃತಿಯ ಸೂಕ್ಷ್ಮತೆಯನ್ನು ವಸ್ತುನಿಷ್ಠವಾಗಿ ಸಂವೇದಿಸಿ ಬರೆಯಲಾಗುವುದಿಲ್ಲ. ಹಾಗೆಯೇ ಮುಸ್ಲಿಂ ಸಂಸ್ಕೃತಿಯನ್ನು ಆ ಜನಾಂಗದೊಳಗಿಂದ ಬಂದವರು ಬರವಣಿಗೆ ರೂಪದಲ್ಲಿ ಅಭಿವ್ಯಕ್ತಪಡಿಸಿದಾಗ ಅದು ಹೆಚ್ಚು ಬಲಿಷ್ಠವಾಗಿರುತ್ತದೆ. ಕನ್ನಡ ಸಾಹಿತ್ಯಕ್ಕೆ ಅಪರಿಚಿತವೆನಿಸುವ ಮುಸ್ಲಿಂ ಅನುಭವಗಳು ಅದು ಕೇವಲ ಆಸಮುದಾಯಕ್ಕೆ ಮಾತ್ರ ಸೀಮಿತವಾಗಿರದೆ ಎಲ್ಲಾ ಜನರನ್ನು ತಲುಪಲು ಸಾಧ್ಯವಾಯಿತು. ಹಾಗಾಗಿ ಅದು ಎಲ್ಲಾ ಮನುಷ್ಯರ ಅನುಭವವಾಗಿ ಕಾಣಿಸಿಕೊಳ್ಳುತ್ತದೆ. ಹಸಿವು, ಬಡತನ, ಮೌಢ್ಯ, ಅನಕ್ಷರತೆ ಮುಸ್ಲಿಮರನ್ನು ಕಾಡಿದಂತೆ ಇತರ ಬಡವರನ್ನೂ ಕಾಡಿದೆ. ಮುಸ್ಲಿಂ ಧರ್ಮದ ಹಿನ್ನೆಲೆಯಲ್ಲಿ ಅಥವಾ ಅಲ್ಲಿಯ ಸಂವೇದನೆಯ ಹಿನ್ನೆಲೆಯಲ್ಲಿ ಸಮಸ್ಯೆಗಳು ಹೇಗೆ ರೂಪು ತಳೆದಿದೆ ಎಂಬುದನ್ನು ಗುರುತಿಸುವುದು ಇಲ್ಲಿ ಮಹತ್ವದ್ದಾಗಿದೆ. ಮುಸ್ಲಿಂ ಜನಾಂಗದಿಂದ ಬಂದ ಲೇಖಕರೇ ಈ ಅನುಭವಗಳನ್ನು ಬರವಣಿಗೆಯ ಮೂಲಕ ತೆರೆದಿಟ್ಟಿರುವುದರಿಂದ ಅವು ಮುಸ್ಲಿಂ ಸಂಸ್ಕೃತಿಯ ನಿಜವಾದ ದಾಖಲೆಗಳಾಗುತ್ತವೆ.

ಎಪ್ಪತ್ತರ ದಶಕದ ನಂತರದ ಕಾಲಘಟ್ಟದಲ್ಲಿ ಮುಸ್ಲಿಂ ಸಂಸ್ಕೃತಿಯ ಸಂರಚನೆಯ ಕುರಿತ ಹಾಗೆ ಕಾದಂಬರಿಗಳನ್ನು ರಚನೆ ಮಾಡಿರುವವರಲ್ಲಿ ಸಾರಾ ಅಬೂಬಕ್ಕರ್ ,ಫಕೀರ್ ಮಹಮ್ಮದ್ ಕಟ್ಪಾಡಿ,ಬೊಳುವಾರ್ ಮಹಮ್ಮದ್ ಕುಂಞ ಪ್ರಮುಖರು. ಇವರ ಕಾದಂಬರಿಗಳಲ್ಲಿ ಅನೇಕವು ಸಾಂಪ್ರದಾಯಿಕ ವ್ಯವಸ್ಥೆ ಈಗಾಗಲೇ ರೂಢಿಸಿಕೊಂಡು ಬಂದ ಸಂಸ್ಕೃತಿಯನ್ನು ಹಾಗೆ ಒಪ್ಪದೆ ಸಂಸ್ಕೃತಿಯ ಮರುನಿರ್ಮಾಣದಲ್ಲಿ ತೊಡಗಿರುವುದನ್ನು ಗುರುತಿಸಬಹುದು. ಸಾರಾ ಅವರ 'ಚಂದ್ರಗಿರಿಯ ತೀರದಲ್ಲಿ', 'ಸಹನಾ', 'ವಜ್ರಗಳು'ಬಹು ಮುಖ್ಯವಾದ ಕಾದಂಬರಿಗಳು. ಸಾರಾ ಅವರ 'ಸಹನಾ' ಕಾದಂಬರಿಯಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪವನ್ನು ದಾಂಪತ್ಯ,ಶಿಕ್ಷಣ, ಸಾಮಾಜಿಕ ಬದುಕು-ಸಂಬಂಧ, ವೃತ್ತಿ ಮತ್ತು ಧರ್ಮ ಮೊದಲಾದ ಅಂಶಗಳ ಮೂಲಕ ಗುರುತಿಸಬಹುದು.

**ದಾಂಪತ್ಯ** : ಮುಸ್ಲಿಂ ಸಮುದಾಯದಲ್ಲಿ 'ದಾಂಪತ್ಯ'ಎಂಬ ಪದಗಳಿಗೆ ಪ್ರಧಾನವಾದ ಅರ್ಥವನ್ನು ನೀಡುವವರು ಪುರುಷರೇ ಆಗಿದ್ದರು. ಹೆಣ್ಣು ದಾಂಪತ್ಯದೊಳಗೆ ಕಾಲಿಡುತ್ತಿದ್ದಂತೆಯೇ ಆಕೆ ಪುರುಷನ ಸರಕಾಗಿ ಗುರುತಿಸಲ್ಪಡುತ್ತಾಳೆ. ತನ್ನ ನೋವು, ಆಸೆ,ಆಕಾಂಕ್ಷೆಗಳಿಗೆ ಯಾವುದೇ ಸಹಾಯ ಸಿಗದಿದ್ದರೂ ಆಕೆ ತನ್ನ ಗಂಡನ ಆಸೆ ಆಕಾಂಕ್ಷೆಗಳನ್ನು ಸಂಪೂರ್ಣವಾಗಿ ಪೂರೈಸುವವಳಾಗಿರಬೇಕಿತ್ತು. ಸಾರಾ ಅವರ 'ಸಹನಾ' ಕಾದಂಬರಿಯಲ್ಲಿ ಬರುವ ನಸೀಮಾ ಮತ್ತು ಪಾಷಾನ ಮನಸ್ಥಿತಿಗಳು ತೀರ ತದ್ವಿರುದ್ಧವಾಗಿತ್ತು. ನಸೀಮಾನ ತಾಯಿ ಸಕೀನಾ ತನ್ನ ಗಂಡನಿಂದ ವಂಚನೆಗೊಳಗಾಗಿ ಎರಡು ವರ್ಷದ ಪುಟ್ಟ ಮಗುವಿನ ಜೊತೆಗೆ ತಾನೇ ಬದುಕನ್ನು ಕಟ್ಟಿಕೊಂಡವಳು. ಬಾಣಂತಿಯರ ಆರೈಕೆ ಮಾಡುತ್ತಾ ಮಗಳ ಮದುವೆಗೆ ಹಣವನ್ನು ಜೋಡಿಸುತ್ತ ಬಂದವಳು. ಹೀಗೆ ಸಕೀನಾಳ ಸ್ವತಂತ್ರ ಬದುಕು ಆರಂಭವಾಗಿ ಮಗಳಿಗೆ ಹದಿಮೂರು ವರ್ಷ ತುಂಬಿದಾಗ ತನ್ನ ಅಣ್ಣನ ಮುಖಾಂತರ ಪಾಷಾನ ಪರಿಚಯವಾಗುತ್ತದೆ. ಮೊದಲೇ ಗಂಡು ದಿಕ್ಕಿಲ್ಲದ ಮನೆಯಾದ ಕಾರಣ ಮುಂದೆ ನಸೀಮಾನಿಗೆ ಹೊರಗಿನವರಿಂದ ಯಾವುದೇ ತೊಂದರೆಯಾಗಬಾರದೆಂಬ ಕಾರಣಕ್ಕೆ ಪಾಷಾ ಹೇಳಿದ ಹಾಗೆ ಮದುವೆಯೂ ನಡೆಯಿತು. ನಸೀಮಾನಿಗೆ ಬಾಲ್ಯದಿಂದಲೂ ಮೂರು ಬಗೆಯ ಆಸೆ ಮನದಲ್ಲಿ ಕಾಡುತ್ತಿತ್ತು. ಮೊದಲನೆಯದು ತಾನು ರೈಲಿನಲ್ಲಿ ಕುಳಿತು ಉಳ್ಳಾಲದ ದರ್ಗಾಕ್ಕೆ ಹೋಗಬೇಕು. ಎರಡನೆಯದು ರೇಷ್ಮೆಯ ಜರಿ ಸೀರೆ ಉಡಬೇಕೆಂದು. ಮೂರನೆಯದು ತಾನು ಸ್ವತಂತ್ರವಾಗಿ ಆಡು ಸಾಕಬೇಕೆಂದು. ಆದರೆ ಈ ಎಲ್ಲಾ ಕನಸುಗಳಿಗೆ ತಾಯಿ ಮನೆಯಲ್ಲಿ ಯಾವುದೇ ಪ್ರೋತ್ಸಾಹ ಸಿಗಲಿಲ್ಲ. ಅಂದರೆ ಸಾಧ್ಯವಾಗಲಿಲ್ಲ. ಮುಂದೆ ಬರುವ ಗಂಡನ ಮುಖಾಂತರ ಈ ಎಲ್ಲಾ ಆಸೆಗಳನ್ನು ಈಡೇರಿಸಿಕೊಳ್ಳು ಎಂದು ತಾಯಿ ಆಕೆ ಕನಸುಗಳಿಗೆ ನೀರೆರೆದಿದ್ದಳು. ತನ್ನ ಕನಸುಗಳು ನನಸಾಗಬಹುದೆಂಬ ಬಹುದೊಡ್ಡ ಆಸೆಯಿಂದಲೇ ನಸೀಮಾ ಮದುವೆಗೆ ಒಪ್ಪಿಗೆ ನೀಡಿದ್ದಳು. ಆದರೆ ತಾಯಿ ಕೊಟ್ಟ ಹಣದಿಂದ ಪಾಷಾ ತನ್ನ ಮನೆಯವರಿಗೆ ಮತ್ತು ನಸಿಮಾಳಿಗೆ ಒಂದೇ ತರಹದ ಸೀರೆ ಖರೀದಿಸಿದ್ದ. ಒಂದು ಎಳೆಯ ಜರಿಯೂ ಇಲ್ಲದ ಸೀರೆ ಕಂಡ

ನಸೀಮಾಳ ಮುಖ ಬಾಡಿ ಹೃದಯ ನಿರಾಶೆಯಿಂದ ಕುದಿದಿತ್ತು."ತಾನು ಎಷ್ಟು ವರ್ಷಗಳಿಂದ ಕನಸು ಕಾಣುತ್ತಿದ್ದೆ? ತನಗೊಂದು ಜರಿಸೀರೆ ಬೇಕೆಂದು? ಮದುವೆಯಾದಾಗ ಗಂಡ ತರು ವನೆಂದು ಹೇಳಿದಳಲ್ಲ ನನ್ನ ತಾಯಿ?"(ಸಾರಾ ಅಬೂಬಕರ್,ಸಹನಾ,೧೯೮೫,ಪುಟ ೨೯) ಎಂದು ಮನದೊಳಗೆ ದಾಂಪತ್ಯದ ಹೊಸ್ತಿಲಲ್ಲಿ ನಿಂತ ನಸೀಮಾಳ ಮನಸ್ಸು ಕುಸಿದುಹೋಗಿತ್ತು. ಆದರೆ ತಾಯಿಯ ಸಾಂತ್ವನದ ಮಾತು ಮುಂದಿನ ದಿನಗಳಲ್ಲಿ ತನ್ನ ಕನಸುಗಳು ನನಸಾಗಬಹುದೇನೋ ಎಂಬ ಆಶಾ ಭಾವನೆಯೊಂದಿಗೆ ಪತಿಯ ಮನೆಗೆ ತೆರಳುವಂತೆ ಮಾಡಿತ್ತು.

ತಾಯಿ ಮಗಳನ್ನು ಗಂಡನ ಮನೆಗೆ ಕಳುಹಿಸುವಾಗ ಹೇಳಿದ ಮಾತು "ನಸೀಮಾ ನೀನಿನ್ನೂ ಚಿಕ್ಕವಳಂತ ತಿಳಿದುಕೊಳ್ಳಬೇಡ. ಮದುವೆಯಾಗಿ ಒಬ್ಬನ ಹೆಂಡತಿಯಾದೆ. ನೀವಿಬ್ಬರೂ ಒಬ್ಬರ ಕಷ್ಟ ಸುಖದ ಲ್ಲೊಬ್ಬರು ಭಾಗಿಯಾಗಬೇಕು. ಮಕ್ಕಳಾಟಿಕೆ ಬಿಟ್ಟು ಗಂಭೀರವಾಗಿ ಗಂಡನ ಮನೆಯಲ್ಲಿ ಹೇಳಿದ ಹಾಗೆ ಕೇಳಿಕೊಂಡಿರು. ಹೆಣ್ಣಿಗೆ ಭೂಮಿಯಷ್ಟೆ ಸಹನೆ ಇರಬೇಕು.ಗಂಡನ ಮನೆಯಲ್ಲಿ ಏನು ಹೆಚ್ಚು ಕಮ್ಮಿಯಾದರೂ ಎಲ್ಲವನ್ನೂ ಸಹಿಸಿಕೊಂಡಿರು".(ಸಾರಾ ಅಬೂಬಕ್ಕರ್,೧೯೮೫,ಪುಟ ೩೦)ಎನ್ನುವ ಮಾತು ಮುಸ್ಲಿಂ ಸಮುದಾಯದಲ್ಲಿ ಹೆಣ್ಣೊಬ್ಬಳು ತನ್ನ ಜವಾಬ್ದಾರಿಯನ್ನು ಹೇಗೆ ನಿಭಾಯಿಸಬೇಕೆಂಬುದನ್ನು ತಿಳಿಸುವಂತಿದೆ. ಅಲ್ಲದೆ ಸಹನಾ ಶಕ್ತಿ ಹೆಣ್ಣಿಗೆ ಬೇಕೇ ಬೇಕು ಎನ್ನುವುದರ ಸೂಚನೆಯಾಗಿದೆ.

ಪಾಷಾನ ಅಕ್ಕ ಮತ್ತು ಅವಳ ಎರಡು ಹೆಣ್ಣು ಮಕ್ಕಳ ಜವಾಬ್ದಾರಿ ಪಾಷಾನ ಮೇಲಿದ್ದ ಕಾರಣ ಆತ ತನ್ನ ಹೆಂಡತಿ ಕಟ್ಟುವ ಬೀಡಿಯನ್ನೇ ಮನೆಯ ವರ ಮಾನವಾಗಿ ನಂಬಿದ್ದನು. ಹಾಗಾಗಿ ನಸೀಮಾ ಪಾಷಾನ ಆಸೆಗಳನ್ನು ಈಡೇರಿಸುವವಳಾಗಿ ಮತ್ತು ಮನೇಲಿ ಯಂತ್ರದಂತೆ ದುಡಿಯುವ ವಸ್ತುವಾಗಿ ಕಾದಂಬರಿಯುದ್ದಕ್ಕೂ ಕಾಣಿಸಿಕೊಳ್ಳುತ್ತಾಳೆ.

ಎಲ್ಲೂ ಅವಳ ಆಸೆ ಆಕಾಂಕ್ಷೆಗಳಿಗೆ ನೀರೆರೆದು ಪೋಷಿಸುವವರು ಯಾರೂ ಕಾಣಿಸುವುದಿಲ್ಲ. ದಿನವಿಡೀ ಯಂತ್ರದಂತೆ ದುಡಿಯುವ ನಸಿಮಾಳಿಗೆ ತಡವಾಗಿ ಬರುವ ಪಾಷಾನನ್ನು ಕಾಯುತ್ತ ಕುಳಿತಿರುವಷ್ಟು ವ್ಯವಧಾನವಿರಲಿಲ್ಲ. ಹಾಸಿಗೆಯಲ್ಲಿ ಮೈಚಾಚಿದೊಡನೆ ನಿದ್ದೆ ಅವಳನ್ನಾವರಿಸುತ್ತಿತ್ತು. ಗಂಡನ ಆತುರ, ಸಂತೋಷ, ಆನಂದ ಅವಳಿಗೊಂದು ಹಿಂಸೆಯಾಗಿಯೇ ಪರಿಣಮಿಸಿತ್ತು. ಗಂಡು ಹೆಣ್ಣಿನ ನಡುವೆ ಇದೊಂದು ಬೇಡದ ಕೆಟ್ಟ ಸಂಬಂಧ ಎಂದೆ ಅವಳು ನಿರ್ಧರಿಸಿದ್ದಳು. ಆದರೆ ಅದನ್ನು ತಡೆದುಕೊಳ್ಳದೆ ಬೇರೆ ದಾರಿ ಇರಲಿಲ್ಲ. ಅರೆನಿದ್ದೆ,ಅರೆ ಎಚ್ಚರದಲ್ಲೂ ಎಲ್ಲವನ್ನು ಸಹಿಸಿಕೊಳ್ಳುತ್ತಿದ್ದ ಅವಳು ಸಹನಾಮೂರ್ತಿಯೇ ಆಗಿದ್ದಳು.

ಅವಿಭಕ್ತ ಕುಟುಂಬದೊಳಗೆ ಬದುಕು ನಡೆಸುವುದು ಮುಸ್ಲಿಂ ಹೆಣ್ಣು ಮಕ್ಕಳಿಗೆ ಕಷ್ಟದ ಕೆಲಸವೇ ಸರಿ. ಆಕೆ ಕೇವಲ ಪತಿಯನ್ನು ಮಾತ್ರ ಮದುವೆಯಾಗುತ್ತಿರಲಿಲ್ಲ. ಬದಲಾಗಿ ಇಡೀ ಮನೆಯವರೆಲ್ಲರ ಕೆಲಸ ಕಾರ್ಯಗಳನ್ನು ನಿಭಾಯಿಸಬೇಕಾಗಿತ್ತು. ಮನೆಗೆ ಸೊಸೆ ಬಂದ ಕೂಡಲೇ ಅತ್ತೆ ತನ್ನ ಮುಂಚಿನ ರೀತಿಯ ಕೆಲಸ ಕಾರ್ಯಗಳಲ್ಲಿ ಆಸಕ್ತಿ ತೋರುವುದು ಕಡಿಮೆಯಾಯಿತು. ನಸೀಮಾ ಒಬ್ಬಳೇ ಮನೆ ಕೆಲಸವನ್ನೆಲ್ಲಾ ಮಾಡಬೇಕಾಯಿತು. ತವರು ಮನೆಗೆ ಹೋಗುವ ಸಂದರ್ಭ ಬಂದಾಗ ಗಂಡನ ಅನುಮತಿಯಿಲ್ಲದೆ ಹೋಗಬಾರದೆಂದು ಅತ್ತೆ ಖತೀಜಮ್ಮ ಹೇಳಿದಾಗ ಅವಳ ಮನದೊಳಗಿನ ಆಸೆ ಎಲ್ಲಾ ನುಚ್ಚು ನೂರಾಗಿ ಹೋಗಿತ್ತು. ಅಲ್ಲದೆ ತಾಯಿ ಮಗನ ಸಂಬಂಧ ಹಾಳು ಮಾಡಲು ಚಾಡಿ ಮಾತನ್ನು ಹೇಳುತ್ತೀಯಾ? ಎಂಬ ಅತ್ತೆಯ ಮಾತು ನಸೀಮಾಳಿಗೆ ಇನ್ನಿಲ್ಲದ ಘಾಸಿ ಮಾಡಿತ್ತು. ಉಳ್ಳಾಲದ ದರ್ಗಾಕ್ಕೆ ಹೋಗುವ ಆಸೆಯನ್ನು ನಸೀಮಾ ವ್ಯಕ್ತಪಡಿಸಿದಾಗಲೂ ಪತಿ ಪಾಷಾ ಮದುವೆಗೆ ಮಾಡಿದ ಸಾಲ ಇನ್ನೂ ಮುಗಿದಿಲ್ಲ. ಒಂದೆರಡು ತಿಂಗಳು ಹೋಗಲಿ, ಆಮೇಲೆ ನೋಡೋಣ, ಎಂದಾಗ ನಸೀಮಾ "ಬಡವರು ಯಾವ ಆಸೆಯನ್ನೂ ಇಟ್ಟುಕೊಳ್ಳಬಾರದು"(ಸಾರಾ ಅಬೂಬಕರ್ ,೧೯೮೫,ಪುಟ ೫೮)ಎಂದು ಮನದಲ್ಲೇ ನೊಂದುಕೊಳ್ಳುತ್ತಾಳೆ. ಇನ್ನೂ ಹದಿನಾಲ್ಕು ವರ್ಷ ತುಂಬುವುದರೊಳಗೆ ನಸೀಮಾ ಗರ್ಭಿಣಿಯಾಗಿದ್ದು, ದೇಹಕ್ಕೆ ಸರಿಯಾಗಿ ಆಹಾರವೂ ಇಲ್ಲದೆ, ಸರಿಯಾದ ವಿಶ್ರಾಂತಿಯೂ ಇಲ್ಲದೆ ಬಸವಳಿದು ಹೋಗಿದ್ದಳು. ಅವಳ ದೇಹ ಸ್ಥಿತಿಯನ್ನು ನೋಡಲಾರದೆ ಪತಿ ಪಾಷಾ ಅವಳ ಆಸೆಯಂತೆ ಘಟ್ಟದ ಮೇಲಿಂದ ನಿಂಬೆ ಹಣ್ಣು ಮತ್ತು ಕಿತ್ತಳೆ ಹಣ್ಣು ತಂದರೆ ಮನೆಯವರೆಲ್ಲಾ ಪಾಲುದಾರರಾಗಿ ನಸೀಮಾನಿಗೆ ಅದು ಇದ್ದೂ ಇಲ್ಲದಂತಾಗಿತ್ತು.

"ಬಹಳ ಪ್ರಯಾಸಪಟ್ಟು ಕೊನೆಗೂ ನಸೀಮಾ ಹೆಣ್ಣುಮಗುವಿಗೆ ಜನ್ಮವಿತ್ತಾಗ, ಆ ಮಗುವನ್ನು ನೋಡಲು ಬಂದ ಪಾಷಾನ ಮಾತುಗಳು ತನ್ನ ಜೀವವನ್ನು ಒತ್ತೆಯಿಟ್ಟು ಸಾವಿನೊಡನೆ ಸೆಣಸಾಡಿ ತನ ಗೊಂದು ಮಗುವನ್ನು ನೀಡಿದವಳು ಇವಳು

ಎಂಬ ಕೃತಜ್ಞತೆಯೂ ಇಲ್ಲದಂತಿತ್ತು".( ಸಾರಾ ಅಬೂಬಕರ್ ,೧೯೮೫,ಪುಟ ೭೪)ಎಂದು ನಸೀಮಾ ಬೇಸರಪಟ್ಟುಕೊಂಡಿದ್ದಳು. ತನಗೆ ಒಂದೇ ಮಗು ಸಾಕಾಗಿತ್ತು. ಇನ್ನೊಂದು ಮಗು ಹುಟ್ಟಿದರೆ ತಾನು ಖಂಡಿತ ಸಾಯುತ್ತೇನೆ ಆದರೆ ಮಗು ಹುಟ್ಟುವುದು ತನ್ನ ಕೈಯಲ್ಲಿದೆಯೇ ಎಂದು ನಸೀಮ ತನ್ನೊಳಗೆ ಗೊಣಗಿಕೊಳ್ಳುವುದು ಅದು ಮುಸ್ಲಿಂ ಸಮಾಜದೊಳಗಿನ ಕೆಳವರ್ಗದ ಹೆಣ್ಣಿನ ಧ್ವನಿಯಾಗಿ ಕಾಣಿಸಿಕೊಳ್ಳುತ್ತದೆ. ಅಂದರೆ ಇಲ್ಲಿ ಹೆಣ್ಣಿಗೆ ಯಾವ ನಿರ್ಧಾರವು ಇಲ್ಲ ಎಂಬುದನ್ನು ಕಾದಂಬರಿ ತಿಳಿಯ ಪಡಿಸುತ್ತದೆ. ಒಂದು ಮಗು ಹುಟ್ಟಬೇಕಾದರೆ ಹೆಣ್ಣಾ ದವಳು ಎಷ್ಟು ಕಷ್ಟ ಪಡಬೇಕು? ತಾನನುಭವಿಸಿದ ವೇದನೆಯನ್ನು ನೋಡಿದ್ದರೆ ಆಗಲೂ ಇವರು ಇಂತಹ ಮಾತೆನ್ನುತ್ತಿದ್ದರೆ?"(ಸಾರಾ ಅಬೂಬಕ್ಕರ್,೧೯೮೫,ಪುಟ ೭೫) ಎನ್ನುವ ನಸೀಮಾನ ಮನದೊಳಗಿನ ಮಾತು ಯಾವ ಕ್ರೂರಿಗಳನ್ನೂ ಒಮ್ಮೆ ಯೋಚಿಸುವಂತೆ ಮಾಡುತ್ತದೆ.

ಮೊದಲ ಮಗುವಿಗೆ ಹತ್ತು ತಿಂಗಳು ತುಂಬಿದಾಗ ಹೊಟ್ಟೆಗೆ ಆರು ತಿಂಗಳಾಗಿತ್ತು ಎಂಬುದು ಕೂಡಾ ಮುಸ್ಲಿಂ ಸಮುದಾಯದ ಕೆಳವರ್ಗದ ಜನತೆಗೆ ಮಕ್ಕಳು ಹುಟ್ಟುವ ಬಗ್ಗೆ ಅರಿವಿಲ್ಲ ಎನ್ನುವುದನ್ನು ತಿಳಿಸುವಂತಿದೆ. ಮೊದಲ ಮಗು ಸತ್ತಾಗಲೂ ನಸೀಮಾನ ಅತ್ತೆ ಮನೆಯಲ್ಲಿ ಯಾವುದೇ ರೀತಿಯ ನೋವು ಕಾಣಿಸಿಕೊಂಡಿರಲಿಲ್ಲ. ಯಾಕೆಂದರೆ ಸತ್ತ ಮಗು ಹೆಣ್ಣೆಂಬ ಕಾರಣಕ್ಕೆ. ಮೊದಲ ಮಗು ಸತ್ತರೂ ಹೆಂಡತಿಯನ್ನು ಸಾಂತ್ವಾನ ಮಾಡುವ ಬದಲು ಆತ ಮತ್ತೆ ಹೆಣ್ಣೊಬ್ಬಳ ಸಂಗ ಬೇಕೇ ಬೇಕೆಂದು ಹೆಂಡತಿಯನ್ನು ಬಲವಂತವಾಗಿ ತನ್ನೆಡೆಗೆ ಸೆಳೆದುಕೊಂಡದ್ದು ನಸೀಮಾನಿಗೆ ದೈಹಿಕ ಮತ್ತು ಮಾನಸಿಕವಾದ ಆಘಾತಕ್ಕೆ ಕಾರಣವಾಗಿತ್ತು.

ಎರಡನೆಯ ಮಗು ಹೆಣ್ಣು ಎಂದು ತಿಳಿದಾಗ ಪಾಷಾ" ಈ ಬಾರಿಯೂ ಹೆಣ್ಣನ್ನೇ ಹಡೆದೆಯಾ ನಿನ್ನ ಹೊಟ್ಟೆಯಲ್ಲಿ ಗಂಡು ಮಗು ಹುಟ್ಟುವುದು ಕನಸಿನ ಮಾತು"(ಸಾರಾ ಅಬೂಬಕ್ಕರ್,೧೯೮೫, ಪುಟ ೯೯) ಎನ್ನುವಲ್ಲಿ ಹೆಣ್ಣು ಹುಟ್ಟುವುದೇ ನೋವನ್ನು ಅನುಭವಿಸಲು ಎಂಬುದು ಸ್ಪಷ್ಟವಾಗುತ್ತದೆ. ಡಾಕ್ಟರ್ ಹೇಳಿದ ಹಾಗೆ ಮಕ್ಕಳ ನಿಯಂತ್ರಣಕ್ಕೆ ಏನಾದರೂ ಉಪಯೋಗಿಸೋಣ ಎಂದು ನಸೀಮಾ ಯೋಚಿಸಿದರೆ ಪತಿ ಪಾಷಾ ಅದೆಲ್ಲ ನಮ್ಮಂಥವರಿಗಲ್ಲ. ಒಂದು ಮಾಡ ಹೋಗಿ ಇನ್ನೊಂದಾಗುತ್ತದೆ. ಮಕ್ಕಳಾಗದ ಹಾಗೆ ಮಾಡಿದರೆ ದೇಹಕ್ಕೆ ಬೇರೇನಾದರೂ ಕಾಯಿಲೆ ಬಂದು ಬಿಡುತ್ತದೆಯಂತೆ. ಮತ್ತೆ ಡಾಕ್ಟರ್ ,ಮದ್ದು, ಅದು ಇದು ಎಂದು ಹಣದ ಖರ್ಚು ಬೇರೆ. ಅದೂ ಅಲ್ಲದೆ ನಾವು ಮುಸ್ಲಿಮರು. ನಾವು ಅದನ್ನೆಲ್ಲ ಮಾಡಬಾರದು.ಮೊನ್ನೆ ಮಸೀದಿಯಲ್ಲಿ ನಮ್ಮ ಖಾಜಿ ಸಾಹೇಬರು ಹಾಗೆ ಮಾಡಬಾರದೆಂದು ಸಾರಿ ಸಾರಿ ಹೇಳಿದ್ದಾರೆ. ನೀನು ಹೀಗೆ ಹೇಳಿದೆ ಎಂದು ಅಮ್ಮನಿಗೆ ತಿಳಿದರೆ ನಿನ್ನ ಬೆನ್ನಿನ ಚರ್ಮ ಸುಲಿದು ಬಿಡುತ್ತಾರೆ"(ಸಾರಾ ಅಬೂಬಕ್ಕರ್ ,೧೯೮೫,ಪುಟ ೧೦೭) ಎಂದು ಆಕೆಯೆದುರು ಆಕೆಯ ಬಾಯಿ ಮುಚ್ಚಿಸುವ ಮೂಲಕ ಹೆಣ್ಣು ಹೀಗೇ ಇರಬೇಕು,ಅವಳ ಮಾನಸಿಕ ಮತ್ತು ದೈಹಿಕ ವೇದನೆಗಳಿಗೆ ಎಳ್ಳಷ್ಟೂ ಬೆಲೆಯಿಲ್ಲ ಎಂಬುದು ಲೇಖಕಿಯ ಅಭಿಪ್ರಾಯವಾಗಿದೆ.

ಮೂರನೆಯ ಮಗು ಗಂಡಾದಾಗ ಅತ್ತೆ ಮನೆಯಲ್ಲಿ ಸಂಭ್ರಮವಿತ್ತಾದರೂ ಸೋತುಹೋದ ನಸೀಮಾಳ ಬಗ್ಗೆ ಯಾರೂ ತಲೆಕೆಡಿಸಿಕೊಂಡಿರಲಿಲ್ಲ. ಮತ್ತೊಮ್ಮೆ ವಾಂತಿಯಾದಾಗ ಅತ್ತೆ ಖತೀಜಮ್ಮ"ಇಂತಹ ರೋಗಿಯಾಗಿ ನೀನು ಸ್ವಲ್ಪ ದೂರವಿರಬಾರದೇ? ಈ ವಿಷಯದಲ್ಲಿ ಹೆಂಗಸರು ಸ್ವಲ್ಪ ಜಾಗ್ರತೆಯಿಂದಿರಬೇಕು"(ಸಾರಾ ಅಬೂಬಕ್ಕರ್,೧೯೮೫, ಪುಟ೧೧೭) ಎನ್ನುವಲ್ಲಿಯೂ ತಪ್ಪೆಲ್ಲವೂ ಹೆಣ್ಣಿನದ್ದೇ ಎನ್ನುವಂತಿದೆ.

ನಸೀಮಾನ ಪರಿಸ್ಥಿತಿಯನ್ನು ಗಂಡ ಅರ್ಥ ಮಾಡಿಕೊಳ್ಳುವುದಿಲ್ಲ.ಮನೆಯಲ್ಲಿರುವ ಇತರರೂ ಅರ್ಥ ಮಾಡಿಕೊಳ್ಳುವುದಿಲ್ಲ. ಗಂಡನಿಗೆ ಆಕೆ ಒಂದು ಭೋಗ ವಸ್ತುವಾಗಿ ಕಾಣುತ್ತಾಳೆಯೇ ವಿನಹ ರಕ್ತಮಾಂಸಗಳಿಂದ ಕೂಡಿದ ಹೃದಯವಂತ ಹೆಣ್ಣಾಗಿ ಕಾಣುವುದಿಲ್ಲ. ಅವಳ ಮನಸ್ಸಿನ ಭಾವನೆಗಳನ್ನು ಅರ್ಥ ಮಾಡಿಕೊಳ್ಳದೆ, ಅವನು ಕೇವಲ ದೇಹವನ್ನು ಕುಕ್ಕುವ ಹದ್ದಿನ ಹಾಗೆ ಕಂಡುಬರುತ್ತಾನೆ. ಅವಳ ಪ್ರತಿಭಟನೆಯನ್ನು ಅವನು ಗಮನಕ್ಕೆ ತಂದುಕೊಳ್ಳುವುದಿಲ್ಲ.

ಮದುವೆಯ ನಂತರ ನಸೀಮಾಳ ಆಸೆ ಆಕಾಂಕ್ಷೆಗಳೆಲ್ಲವೂ ಸುಟ್ಟು ಕಮರಿ ಹೋಗುತ್ತದೆ. ಇಲ್ಲಿ ಹೆಣ್ಣಿನ ಕನಸುಗಳಿಗೆ ಯಾವುದೇ ಬೆಲೆ ಇರುವುದಿಲ್ಲ.

ಬೀಡಿ ಕಟ್ಟುತ್ತಾ ತನ್ನೆಲ್ಲಾ ಕನಸನ್ನು ಮರೆಯುತ್ತಿದ್ದಳಾದರೂ ಮೂರನೆಯ ಹೆರಿಗೆಯ ನಂತರ ಆಕೆಯಿಂದ ಬೀಡಿ ಕಟ್ಟಲು ದೇಹದಲ್ಲಿ ಶಕ್ತಿ ಇರಲಿಲ್ಲ. ಪುರುಷ ನಿಷ್ಠ ಸಮಾಜದಲ್ಲಿ ಹೆಣ್ಣು

ಯಾವ ದೌರ್ಜನ್ಯಕ್ಕೆ ಒಳಗಾಗುತ್ತಾಳೆ ಎಂಬುದನ್ನು ಕಾದಂಬರಿ ಸ್ಪಷ್ಟವಾಗಿ ನಿರೂಪಿಸಿದೆ. ಅವಳ ರೋಗದ ಕುರಿತು ಯಾವುದೇ ಕಾಳಜಿ ಕಾದಂಬರಿಯೊಳಗೆ ಕಾಣಿಸುವುದಿಲ್ಲ. ಬೀಡಿ ಕಟ್ಟುವುದನ್ನು ಸಂಪೂರ್ಣವಾಗಿ ನಿಲ್ಲಿಸಿದಾಗ ಸಿಡಿಮಿಡಿಗೊಂಡ ಅತ್ತೆ ಅವಳನ್ನು ಮಾನಸಿಕವಾಗಿ ಹಿಂಸಿಸುತ್ತಾಳೆ. ಅವಳ ಸಿಟ್ಟು ನಸೀಮಾಳನ್ನು ಮತ್ತಷ್ಟು ನೋವಿನ ಕೂಪಕ್ಕೆ ತಳ್ಳುತ್ತದೆ. ಈ ರೋಗದ ಮೊಟ್ಟೆಯಿಂದ ತನ್ನ ಮಗನಿಗೆ ಸುಖವಿಲ್ಲ ಎಂದು ಹಲುಬುತ್ತಾಳೆ. ಕಾರಣ ತನಗೆ ಆರ್ಥಿಕ ಹೊಡೆತವೇ ಆಗಿದೆ. ಇಲ್ಲಿ ಲೇಖಕಿ ನಸೀಮಾಳನ್ನು ರೋಗಗ್ರಸ್ತ ವ್ಯವಸ್ಥೆಯ ಪ್ರತೀಕ ಎಂಬಂತೆ ಚಿತ್ರಿಸುತ್ತಾಳೆ. ರೋಗದ ಹೆಂಡತಿಯನ್ನು ಮನೆಯಲ್ಲಿಟ್ಟುಕೊಂಡೇ ಅವಳಿಗೆ ಯಾವುದೇ ಔಷಧಿ ಮಾಡದೆ ಪಾಷಾ ಮರು ಮದುವೆಯಾಗುತ್ತಾನೆ. ಇದು ನಸೀಮಾಳಿಗೆ ತೀರಾ ಆಘಾತದ ವಿಷಯ. ಯಾವ ಹೆಣ್ಣು ತನ್ನ ಸ್ಥಾನದಲ್ಲಿ ಬೇರೊಬ್ಬಳನ್ನು ನೋಡಲು ಇಷ್ಟಪಡಳು.

ಸ್ತ್ರೀ ಸಹಜವಾದ ಅಸೂಯೆ, ಅಸಹಾಯಕತೆ ಅವಳನ್ನು ಬಾಧಿಸುತ್ತದೆ. ಪಾಷಾ ಮತ್ತೊಂದು ಮದುವೆಯಾಗಿ ಬಂದಾಗ ನಸೀಮಾ ಪರಿತಪಿಸುತ್ತಿರುವ ರೀತಿಯನ್ನು ಲೇಖಕಿ ತಾನೇ ಸ್ವತಃ ಅನುಭವಿಸಿದಂತೆ ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಇಲ್ಲಿ ಸ್ತ್ರೀ ಸಹಜವಾದ ಗುಣಗಳು ಅವಳ ಸಂವೇದನೆಗಳು ಎದ್ದುಕಾಣುತ್ತದೆ. ಗಂಡಸಿನ ಕ್ರೌರ್ಯದೆದುರು ಹೆಣ್ಣು ಎಷ್ಟು ಅಸಾಯಕಳು ಎಂಬುದನ್ನು ಈ ಮಾತುಗಳು ಹೇಳುತ್ತವೆ." ಈ ವರೆಗೂ ಭೂಮಿಯಂತಹ ಸಹನೆಯನ್ನು ಆಕೆ ತೋರಿದ್ದಳು. ಬಾಗಿಲ ಹಿಂದಿನಿಂದ ಪಿಸುಮಾತು, ನಗು ಕಿವಿಗೆ ಬಿದ್ದಾಗ ಆಕೆಗೆ ಅಗ್ನಿಕುಂಡದಲ್ಲಿದ್ದಂತಹ ಅನುಭವವಾಗುತ್ತದೆ. ತನ್ನ ಒಂದೇ ಒಂದು ಚಿಕ್ಕ ಕೋರಿಕೆಯನ್ನೂ ತನ್ನ ಗಂಡ ಈವರೆಗೂ ಈಡೇರಿಸದೇ ಹೋಗಿದ್ದರೂ ಆಕೆ ಈವರೆಗೆ ಗಂಡ ಮತ್ತು ಅತ್ತೆಯೊಡನೆ ಮುನಿಸಿಕೊಂಡಿರಲಿಲ್ಲ. ಹೊಟ್ಟೆ ತುಂಬಾ ಊಟವಿಲ್ಲದೆ ಹೋಗಿದ್ದರೂ ತಾಯಿಯೊಡನೆ ದೂರು ಹೇಳಿರಲಿಲ್ಲ. 'ಕ್ಷಮಯಾ ಧರಿತ್ರಿ' ಎಂಬ ಹೆಸರನ್ನು ಸಾರ್ಥಕಪಡಿಸಿಕೊಂಡಿದ್ದಳು.(ಸಾರಾ ಅಬೂಬಕರ್ ,೧೯೮೪,ಪುಟ ೧೩೩)

ನಸೀಮನ ಬದುಕು ಯಾತನಾಮಯವಾಗಿತ್ತು. ಆದರೆ ತಾಯಿಯ ಮನೆಗೆ ಹೋದ ನಂತರ ಆರೋಗ್ಯವಾಗಿಯೂ, ದೈಹಿಕವಾಗಿಯೂ, ಮಾನಸಿಕವಾಗಿಯೂ ಸುಧಾರಿಸಿ ಕೊಂಡಿದ್ದಳು. ಆಕೆ ಹಿಂದಿನದೆಲ್ಲ ಮರೆತು ಪುನರ್ಜನ್ಮ ಪಡೆದಂತೆ ಬದುಕುತ್ತಿರುವಾಗಲೇ ಪತಿ ಪಾಷಾನ ಆಗಮನವಾಗುತ್ತದೆ. ಇದುವರೆಗೆ ಅತ್ತೆ ಗಂಡನ ಹಿಂಸೆಯಿಂದ ನೊಂದ ಮುಗ್ಧೆ ಇಲ್ಲಿ ಮನುಷ್ಯಳಾಗಿ ವಿಚಾರ ಮಾಡುತ್ತಾಳೆ. ಕ್ಷಮಯಾಧರಿತ್ರಿಯಂತೆ,ಸಹನೆಯಿಂದ ಬದುಕಿದ್ದ ಅವಳು ಸಹನೆಯನ್ನು ಮೀರಿ ಒಮ್ಮೆಲೆ ಸ್ಫೋಟಗೊಳ್ಳುತ್ತಾಳೆ. ಗಂಡ ಪುನಃ ಕರೆಯಲು ಬಂದಾಗ ಆತನನ್ನು ತಿರಸ್ಕರಿಸುತ್ತಾಳೆ. ನೀನಿಲ್ಲದೆ ಒಂಟಿಯಾಗಿ ಬಾಳಬಹುದು, ಬಾಳುತ್ತೇನೆ ಎಂಬ ಛಲವನ್ನು ಹೊತ್ತವ ಳಾಗುತ್ತಾಳೆ. ಯಾವಾಗ ತನ್ನ ಗಂಡ ಬೇರೊಬ್ಬನನ್ನು ಮದುವೆಯಾಗಿ ಅವಳನ್ನು ಮನೆಗೆ ಕರೆತರುತ್ತಾನೋ ಆವಾಗಲೇ ಆಕೆ ಸಹನೆಯ ಮುಸುಕನ್ನು ಒಂದೊಂದಾಗಿ ಹರಿದು ಹೊರಬರಲು ಪ್ರಯತ್ನಿಸಿದ್ದಾಳೆ. ನಂತರ ತಾಯಿಯ ಮನೆಗೆ ಬಂದು ಅಳಿದುಳಿದ ಸಹನೆಯ ಮುಸುಕನ್ನು ಪೂರ್ಣವಾಗಿ ಹರಿದು ಹೊರಬರುತ್ತಾಳೆ. ಛಲದ ವ್ಯಕ್ತಿತ್ವವನ್ನು ಮೈಗೂಡಿಸಿಕೊಳ್ಳುತ್ತಾಳೆ. ಗಂಡನ ಯಾವ ಬೆದರಿಕೆಯ ನುಡಿಗೂ ಬಗ್ಗದೆ ಬದುಕುತ್ತಾಳೆ. ಇಲ್ಲಿ ಆಕೆ ತನ್ನ ಗಂಡ, ತಲಾಖ್, ಸಂಸಾರ,ಸಮಾಜ ಎಲ್ಲವನ್ನೂ ಮೀರಿ ಬೆಳೆಯುವ ರೀತಿಯನ್ನು ಕಾಣುತ್ತೇವೆ. ಮುಗ್ಧೆಯಾಗಿದ್ದ ನಸೀಮಾ ಇಡೀ ಸಮಾಜದ ವ್ಯವಸ್ಥೆಯನ್ನು ಅಲ್ಲಾಡಿಸುವ ತಳಪಾಯವಾಗಿ ಕಾಣಿಸುತ್ತಾಳೆ.

ಇಲ್ಲಿ ಸಂಪ್ರದಾಯ,ಮೌಢ್ಯ, ಅಜ್ಞಾನ, ಬಡತನ ಗಳಲ್ಲಿ ಸಿಕ್ಕಿ ನರಳಿದ ಹೆಣ್ಣೊಂದು ಕೊನೆಗೆ ಸ್ವತಂತ್ರವಾಗಿ ಆಲೋಚನೆ ಮಾಡುವುದು, ಬದುಕಲು ಹಾತೊರೆಯುವುದು, ದಿನನಿತ್ಯ ಕೊಂದು ತಿನ್ನುವ ಸಮಾಜ ವ್ಯವಸ್ಥೆಯ, ವಿಷವರ್ತುಲದಿಂದಲೇ ದೂರ ಸರಿಯುವುದು, ಆತ್ಮಾಭಿಮಾನದಿಂದ ತಲೆ ಎತ್ತಿ ಬದುಕುವುದು ಇಲ್ಲಿ ತೀರಾ ಮುಖ್ಯವೆನಿಸುತ್ತದೆ.

ಇಲ್ಲಿ ಮನುಷ್ಯನ ನೋವಿನ ಬದುಕಿಗೆ ಪ್ರತಿಭಟನೆಯ ಪಾಠವನ್ನು ಹೇಳಿ ಕೊಡುತ್ತದೆ ಎಂಬುದಕ್ಕೆ ಈ ಕಾದಂಬರಿಯಲ್ಲಿ ಬರುವ ನಸೀಮಾ ಸ್ಪಷ್ಟ ಉದಾಹರಣೆಯಾಗಿದ್ದಾಳೆ. ಮುಸ್ಲಿಂ ಜನಾಂಗದ ಮೌಢ್ಯದ ಪ್ರತೀಕವಾಗಿ ಬರುವ ಪಾಷ ಕೊನೆಯ ಹಂತದಲ್ಲಿ ಅವಳನ್ನು ಉಳಿಸಿಕೊಳ್ಳಲು ಪ್ರಯತ್ನಿಸಿ ವಿಫಲನಾಗಿ ನಂತರ ಹೆದರಿಸಲು ಪ್ರಯತ್ನಿಸುತ್ತಾನೆ. ಆಗ ಆಕೆ ಕೊಡುವ ಪ್ರತ್ಯುತ್ತರ ಕೇವಲ ಮುಸ್ಲಿಂ ಮಹಿಳೆಯರಿಗಷ್ಟೇ ಅಲ್ಲದೆ ಇಡೀ ಸ್ತ್ರೀ ಸಮೂಹಕ್ಕೆ ಅನ್ವಯಿಸುವಂತಾಗಿದೆ. ಒಟ್ಟಿನಲ್ಲಿ ಈ ಕಾದಂಬರಿಯಲ್ಲಿ ನಸೀಮಾ ಸಹನಾಮೂರ್ತಿಯಾಗಿ ಬೆಳೆದು ಗಂಡಸಿನ ದಬ್ಬಾಳಿಕೆಯನ್ನು ಸಹಿಸಿ ಕೊನೆಗೆ ಧರ್ಮ ಹಾಕಿದ

ಗೆರೆಗಳನ್ನು ತಾನು ದಾಟುವುದರ ಮೂಲಕ ಬದುಕಿನ ಸತ್ಯವನ್ನು ಎತ್ತಿ ತೋರಿಸುತ್ತಾಳೆ. ಪ್ರತಿಭಟನೆಯನ್ನು ಮಾಡುವುದರ ಮೂಲಕ ಇಡೀ ಸ್ತ್ರೀ ಸಮೂಹದ ಅಸ್ತಿತ್ವ ವನ್ನು ಎತ್ತಿಹಿಡಿಯುತ್ತಾಳೆ.

**ಶಿಕ್ಷಣ :** ಸಾರಾ ಅವರ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಪುರುಷರ ಶೈಕ್ಷಣಿಕ ಮಟ್ಟವಂತೂ ತೀರಾ ಪ್ರಾಥಮಿಕ ನೆಲೆಯದು. ಕೆಲವರು ಧಾರ್ಮಿಕ ಶಿಕ್ಷಣವನ್ನು ಪಡೆದಿದ್ದರೆ ಹಲವರು ಅದನ್ನೂ ಪಡೆದಿಲ್ಲ. ಒಂದು ಸಣ್ಣ ಗುಂಪು ಮಾತ್ರ ಆಧುನಿಕ ಶಿಕ್ಷಣದ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾಗಿದೆ. ಪ್ರೌಢಶಾಲಾ ಶಿಕ್ಷಣವನ್ನು ಪಡೆದವರ ಸಂಖ್ಯೆ ತೀರಾ ಕಡಿಮೆ. ಇವೆಲ್ಲವುಗಳ ಪರಿಣಾಮವಾಗಿ ಅವರ ಆರ್ಥಿಕ ಸ್ಥಿತಿಗತಿ ಕೆಳಮಟ್ಟದ್ದಾಗಿದ್ದು, ಹೆಚ್ಚಿನವರು ಸ್ತ್ರೀಯರ ದುಡಿಮೆಯನ್ನೇ ಅವಲಂಬಿಸಿದವರು. ಗೃಹಕೃತ್ಯದ ಜವಾಬ್ದಾರಿಗಳಿಂದ ಪಲಾಯನ ಮಾಡುವ ಗಂಡಸರಾಗಿ ಕಾಣಿಸಿಕೊಳ್ಳುತ್ತಾರೆ. ಸಾರಾ ಅವರ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಮಹಿಳೆಯರೆಲ್ಲಾ ಪುರುಷ ಪ್ರಧಾನ ವ್ಯವಸ್ಥೆ ಹಾಕಿಕೊಟ್ಟ ಚೌಕಟ್ಟನ್ನು ಮೀರದಂತವರು. ಹಾಗಾಗಿ ಆರ್ಥಿಕ ಹೊಡೆತ ಮಹಿಳೆಯರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿದೆ.

ಶಿಕ್ಷಣ ಪಡೆಯುವ ವಯಸ್ಸಿನಲ್ಲಿ ದಾಂಪತ್ಯದೊಳಗೆ ಕಾಲಿಡಬೇಕಾದ ಸನ್ನಿವೇಶಗಳು ಮುಸ್ಲಿಂ ಸಮುದಾಯ ದೊಳಗಿರುವುದನ್ನು ಕಾದಂಬರಿ ಚಿತ್ರಿಸಿದೆ. ಈ ಕಾರಣಕ್ಕಾಗಿಯೇ ಸ್ತ್ರೀಯರು ಅನೇಕ ಕಷ್ಟಗಳಿಗೆ ತುತ್ತಾಗುವುದನ್ನು ಕಾದಂಬರಿ ತೋರಿಸಿಕೊಡುತ್ತದೆ. ಹಿಂದಿನಿಂದ ರೂಢಿಗತವಾಗಿ ಬಂದಿರುವುದನ್ನೇ ಸ್ತ್ರೀಯರು ಪಾಲಿಸಿಕೊಂಡು ಹೋಗಬೇಕಾಗಿತ್ತು. ಅಪ್ಪಿತಪ್ಪಿಯೂ ಯಾವುದನ್ನೂ ಪ್ರಶ್ನಿಸುವಂತಿರಲಿಲ್ಲ. 'ಸಹನಾ' ಕಾದಂಬರಿಯಲ್ಲಿ ಬರುವ 'ಪಾತುಮ್ಮಜ್ಜಿ'ಯ ಪಾತ್ರವು ಹಿರಿಯಳಾಗಿದ್ದು ಗಂಡನಿಂದ ವಂಚಿತಳಾದ ಮಹಿಳೆಯರಿಗೆ ಬದುಕಿನ ದಾರಿಯನ್ನು ತಿಳಿ ಹೇಳುವ ಮೂಲಕ ಸರ್ವವನ್ನೂ ಕಳೆದುಕೊಂಡು ಬದುಕನ್ನೇ ಕೊನೆಗಾಣಿಸಬೇಕೆಂದು ತೀರ್ಮಾನಿಸಿದ ಹೆಣ್ಣುಗಳಿಗೆ ಆದರ್ಶಪ್ರಾಯವಾಗಿ ಆಕೆ ಕಾಣಿಸಿಕೊಳ್ಳುತ್ತಾಳೆ. 'ಪಾತುಮ್ಮಜ್ಜಿ' ಶಾಲೆಗೆ ಹೋಗಿ ಶಿಕ್ಷಣವನ್ನು ಪಡೆಯದೆ ಇರಬಹುದು. ಆದರೆ ಮಾನವೀಯತೆಯ ಶಿಕ್ಷಣವನ್ನು ಅದಾಗಲೇ ತನ್ನೊಳಗೆ ಪಡೆದುಕೊಂಡಿದ್ದಳು. ಮುಸ್ಲಿಂ ಸಮುದಾಯದೊಳಗೆ ಹೆಣ್ಣು ಮಕ್ಕಳಿಗೆ ಹತ್ತು ವರ್ಷವಾಗುವಾಗಲೇ ತಾಯಂದಿರಿಗೆ ಅವರ ಮದುವೆಯ ಚಿಂತೆಯಾಗುವುದನ್ನು ಕಾದಂಬರಿ ಹೇಳಲು ಪ್ರಯತ್ನಿಸುತ್ತದೆ. ಅಲ್ಲದೆ ಮುಸ್ಲಿಂ ಶಾಲೆಯಲ್ಲೇ ನಾಲ್ಕನೆಯ ತರಗತಿಯವರೆಗೆ ಓದಿ, ಕುರಾನನ್ನು ಮೊದಲ ಅಧ್ಯಾಯದಿಂದ ಕೊನೆಯ ಅಧ್ಯಾಯದವರೆಗೆ ಚೆನ್ನಾಗಿ ಓದಲು ಬಂದರೆ ಮತ್ತು ನಮಾಜ್ ಮಾಡುವುದನ್ನು ಚೆನ್ನಾಗಿ ಕಲಿತರೆ ಸಾಕಿತ್ತು. ಬೇರೆ ಶಿಕ್ಷಣದ ಅವಶ್ಯಕತೆಯಿಲ್ಲ ಎಂಬ ಮನೋಭಾವ ಹೆಣ್ಣು ಮಕ್ಕಳ ಪೋಷಕರಲ್ಲಿತ್ತು.ಅಲ್ಲದೆ ಆರ್ಥಿಕ ತೊಂದರೆಯೂ ಇದಕ್ಕೆ ಕಾರಣವಾಗಿತ್ತು. ಹಾಗಾಗಿ ಸಕೀನಳ ಮಾತು "ನಸೀಮ ನೀನು ಇನ್ನು ಶಾಲೆಗೆ ಹೋದದ್ದು ಸಾಕು, ನಮ್ಮಂತವರೆಲ್ಲಾ ಓದಿ ಏನು ಮಾಡಬೇಕಾಗಿದೆ?. ನಾವೇನು ಸರಕಾರಿ ಕೆಲಸಕ್ಕೆ ಹೋಗುತ್ತೇವೆಯೇ? ಓದಲು ಬರೆಯಲು ಕಲಿತರೆ ಧಾರಾಳ ಸಾಕು. ಆ ಮೂಲೆ ಮನೆಯ ಸೀತಮ್ಮನ ಮಗಳು ಸರೋಜ ಬೀಡಿ ಕಟ್ಟುತ್ತಿದ್ದಾಳಲ್ಲ? ಅವಳ ಜೊತೆ ಸೇರಿಕೊಂಡು ಬೀಡಿ ಕಟ್ಟುವುದನ್ನು ಕಲಿತುಕೊ, ನಾಲ್ಕು ಕಾಸಿನ ಸಂಪಾದನೆಯಾದರೂ ಆಗುತ್ತದೆ."(ಸಾರಾ ಅಬೂಬಕರ್ ,೧೯೮೫,ಪುಟ 8 ) ಎನ್ನುವಲ್ಲಿ ಹಣದ ಅವಶ್ಯಕತೆ ಮಗಳ ಮದುವೆಗೆ,ವರದಕ್ಷಿಣೆಗೆ ಎಷ್ಟು ಅವಶ್ಯಕ ಎನ್ನುವುದನ್ನು ತಿಳಿ ಹೇಳುವಂತಿದೆ.

ಶಿಕ್ಷಣದ ಕೊರತೆ ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಬದುಕನ್ನು ಎಷ್ಟೊಂದು ನಲುಗಿಸುತ್ತದೆ ಎನ್ನುವುದು 'ಸಹನಾ' ಕಾದಂಬರಿಯ ನಸೀಮನ ಪಾತ್ರದಲ್ಲಿ ವ್ಯಕ್ತವಾಗುತ್ತದೆ. ಹದಿಮೂರನೇ ವಯಸ್ಸಿಗೆ ಮದುವೆಯಾಗಿ ಹದಿನಾಲ್ಕು ತುಂಬುದರೊಳಗೆ ಒಂದು ಮಗುವಿನ ತಾಯಿಯಾಗಿ ಆ ಹೆರಿಗೆಯ ಸಮಯದಲ್ಲಿ ಅವಳು ಪಡುವ ಯಾತನೆ ಅವಳ ಯಾತನೆ ಕಂಡು ಸೂಲಗಿತ್ತಿ ಹೇಳುವ ಬುದ್ಧಿ ಮಾತು, ಅಲ್ಲದೆ ವರ್ಷವೊಂದಕ್ಕೆ ಒಂದೊಂದು ಮಗುವಿನ ತಾಯಿಯಾಗಿ ಅವಳು ದೈಹಿಕ ಮತ್ತು ಮಾನಸಿಕ ಕಾಯಿಲೆಗೆ ಒಳಗಾಗುವುದು ಇವೆಲ್ಲವೂ ಆ ಸಮುದಾಯದ ಒಳಗಿರುವ ಗಂಡು ಹೆಣ್ಣಿನ ಶಿಕ್ಷಣದ ಕೊರತೆಯ ಕಾರಣ ದಿಂದಾಗಿದೆ. ಅಲ್ಲದೆ ಮೊದಲ ಮಗು ವಿಪರೀತ ಜ್ವರದಿಂದ ಬಳಲುತ್ತಿದ್ದರೂ, ಅದನ್ನು ಡಾಕ್ಟರ ಬಳಿ ಕರೆದುಕೊಂಡು ಹೋಗದೆ ಧರ್ಮದ ಪ್ರಕಾರ ನಡೆದುಕೊಂಡು ಅದರಿಂದ ಮಗು ಸಾವನ್ನಪ್ಪುವುದು ಇವೆಲ್ಲವೂ

ಶಿಕ್ಷಣದ ಕೊರತೆಯಿಂದಲೇ ಎನ್ನುವುದನ್ನು ಕಾದಂಬರಿ ತಿಳಿಸುವ ಪ್ರಯತ್ನ ಮಾಡಿದೆ.

ಗಂಡು ಮತ್ತು ಹೆಣ್ಣು ಮಕ್ಕಳ ನಡುವಿನ ಭೇದ ಭಾವ ಕಾದಂಬರಿಯ ಉದ್ದಕ್ಕೂ ಕಾಣಿಸುತ್ತಾ ಹೋಗುತ್ತದೆ. 'ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ' ಎಂಬ ನಸೀಮಳ ಅತ್ತೆಯ ಮಾತು, ಇದು ಶಿಕ್ಷಣದ ಕೊರತೆಯ ಕಾರಣವೇ ಎನ್ನಬಹುದು. ಬದುಕನ್ನು ನಿಭಾಯಿಸಲು ಹೆಣ್ಣು ಪಡುವಷ್ಟು ಕಷ್ಟವನ್ನು ಕಾದಂಬರಿಯಲ್ಲಿ ಬರುವ ಗಂಡು ಪಾತ್ರಗಳು ಪಟ್ಟಿಲ್ಲ. ಆದರೆ ತಿನ್ನುವ ಸಂದರ್ಭದಲ್ಲಿ ಮೀನಿನ ತುಂಡುಗಳೆಲ್ಲಾ ಗಂಡು ಮಕ್ಕಳಿಗೆ ಮೀಸಲು.ಜೊತೆಗೆ ಹದಿನಾಲ್ಕುವರ್ಷವಾದರೂ ಗಂಡು ಮಕ್ಕಳು ಹೊರಗಡೆ ಆಟ ಆಡುತ್ತಿರಬಹುದು, ಹೆಣ್ಣು ಮಾತ್ರ ದಾಂಪತ್ಯದೊಳಗೆ ಸಿಲುಕಿ ಇಡೀ ಪತಿಯ ಕುಟುಂಬವನ್ನು ಜವಾಬ್ದಾರಿಯಿಂದ ನಿಭಾಯಿಸಬೇಕಾಗಿತ್ತು. ಇದು ಶಿಕ್ಷಣದ ಕೊರತೆಯಿಂದಲೇ ಎಂಬುದನ್ನು ಕಾದಂಬರಿ ತಿಳಿಸುವ ಪ್ರಯತ್ನ ಮಾಡುವಂತಿದೆ. ನಸೀಮಾಳ ವೈಚಾರಿಕ ಪ್ರಜ್ಞೆ ಜಾಗೃತಗೊಂಡಾಗ ತನ್ನ ಮಗಳನ್ನು ಕಳಕೊಂಡ ನೋವು ಅವಳನ್ನು ಮತ್ತೆ ಮತ್ತೆ ಕಾಡಲಾರಂಭಿಸಿತ್ತು. ಅವಳನ್ನು ಡಾಕ್ಟರಿಗೆ ತೋರಿಸಿದ್ದರೆ ಅವಳಿಗೆ ಸರಿಯಾದ ಚಿಕಿತ್ಸೆ ಮಾಡಿಸಿದ್ದರೆ ಅವಳು ಬದುಕುತ್ತಿದ್ದಳೊ ಏನೊ.. ಗಂಡಾಗಿದ್ದರೆ ಅವಳಿಗೆ ಸರಿಯಾದ ಚಿಕಿತ್ಸೆ ದೊರೆಯುತ್ತಿತ್ತೇನೊ"(ಸಾರಾ ಅಬೂಬಕರ್,೧೯೮೫,ಪುಟ ೯೪) ಎನ್ನುವಲ್ಲಿ ವ್ಯಕ್ತವಾಗುತ್ತದೆ. ಮೊದಲ ಮಗುವನ್ನು ಕಳೆದುಕೊಂಡಿದ್ದರೂ, ಎರಡನೆಯ ಮಗು ಹೆಣ್ಣೆಂದು ಅದನ್ನು ತಿರಸ್ಕಾರದಿಂದ ನೋಡುವ ಪತಿ ಮತ್ತು ಅತ್ತೆಯ ಗುಣಗಳು ಸರಿಯಾದ ಶಿಕ್ಷಣವನ್ನು ಪಡೆಯದಿರುವುದೇ ಇದಕ್ಕೆಲ್ಲ ಕಾರಣ ಎಂಬುದನ್ನು ಲೇಖಕಿ ತಿಳಿಯಪಡಿಸುವ ಪ್ರಯತ್ನವನ್ನು ಮಾಡುತ್ತಾರೆ.

ಪತ್ನಿಗೆ ರೋಗ ಬಂದಾಗ ಅದಕ್ಕೆ ಸರಿಯಾದ ಚಿಕಿತ್ಸೆಯನ್ನು ಮಾಡದೆ ಆಕೆ ದುಡಿದ ಹಣವನ್ನೆಲ್ಲಾ ತಮ್ಮ ಉಪಯೋಗಕ್ಕೆ ಉಪಯೋಗಿಸಿಕೊಂಡು ಕೊನೆಗೆ ಪತ್ನಿ ಇನ್ನು ಉಪಯೋಗಕ್ಕೆ ಬರೋದಿಲ್ಲ ಎಂದು ತಿಳಿದಾಗ ಪತಿ ಬೇರೊಂದು ಮದುವೆಯಾಗುವುದು ಶಿಕ್ಷಣದ ಕೊರತೆಯಿಂದಲೇ. ತಾಯಿಯ ಆರೈಕೆಯಿಂದ ಮತ್ತೆ ಪುನರ್ಜನ್ಮ ಪಡೆದ ನಸೀಮಾಳನ್ನು ಪತಿ ಮತ್ತೆ ಕರೆದೊಯ್ಯಲು ಬಂದಾಗ ಆಕೆ ಸಹನೆ ಕಳೆದುಕೊಂಡು ಪ್ರಗತಿಪರ ಆಲೋಚನೆಯ ಮೂಲಕ ಕೊಡುವ ಪ್ರತ್ಯುತ್ತರ ಅದು ಇಡೀ ಸಮಾಜದೊಳಗಿನ ಪುರುಷ ಸಮುದಾಯವೇ ತಲೆತಗ್ಗಿಸುವಂತಿದೆ. ಒಟ್ಟಿನಲ್ಲಿ ಶಿಕ್ಷಣದ ಕೊರತೆ ಮುಸ್ಲಿಂ ಸಮುದಾಯದ ಒಳಗೆ ಬಹಳ ಕಾಣಿಸುತ್ತಿದ್ದು, ಇದು ಹೊಸ ಬದಲಾವಣೆಯ ಕಡೆಗೆ ಸಾಗಬೇಕೆಂಬ ಆಶಯ ಕಾದಂಬರಿಗಾರ್ತಿಯಲ್ಲಿ ಎದ್ದು ಕಾಣಿಸುವಂತಿದೆ.

**ಸಾಮಾಜಿಕ ಬದುಕು ಸಂಬಂಧ :**

ಸಾರಾ ಅವರು ತಮ್ಮ ಸಮುದಾಯದ ಹುಳುಕುಗಳನ್ನು ಬರವಣಿಗೆಯ ಮೂಲಕ ಈ ಸಮಾಜಕ್ಕೆ ಎತ್ತಿ ತೋರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಹಾಗಾಗಿ ಇಲ್ಲಿ ಮುಸ್ಲಿಂ ಸಮುದಾಯದ ಕೆಳವರ್ಗದ ಜನರ ಸಾಮಾಜಿಕ ಬದುಕನ್ನು ಪರಿಶೀಲಿಸುವ ಮೂಲಕ ಅದರೊಳಗಿನ ಇನ್ನೂ ಹೊರಗೆ ಗೋಚರಿಸದಿರುವ ಅನೇಕ ಮೌಢ್ಯಗಳನ್ನು ಪತ್ತೆಹಚ್ಚಿ ಆ ಮೂಲಕ ಅಲ್ಲೊಂದು ಅರಿವಿನ ಬೆಳಕನ್ನು ಹಚ್ಚುವ ಕೆಲಸವನ್ನು ಮಾಡುವ ಪ್ರಯತ್ನವನ್ನು ನಾವು ಗುರುತಿಸಬಹುದು. ಬದುಕಿನ ಶೋಧವು ಸಾರಾ ಅವರ ಇನ್ನೊಂದು ಕೇಂದ್ರ. ಅದಕ್ಕಾಗಿಯೇ ಪಶ್ಚಿಮದ ಕಡಲ ತೀರದ ಚಿಕ್ಕ ಊರಿನಲ್ಲಿ ವಾಸಿಸುತ್ತಿರುವ ತಮ್ಮ ಸಮುದಾಯದ ಜನರ ಬದುಕಿನ ಶೋಧವೇ ಅವರ ಕಾದಂಬರಿಯ ಕೇಂದ್ರ ವಸ್ತು. ಹೀಗೆ ಸಣ್ಣ ಊರಲ್ಲಿ ವಾಸಿಸುತ್ತಿದ್ದ ಸಕೀನಾಳ ಬದುಕು ತೊರೆದ ಗಂಡ ಮತ್ತು ಎರಡು ವರ್ಷದ ಮಗಳೊಂದಿಗೆ ಆರಂಭವಾಗುವುದು. ತಾನು ದಿಕ್ಕುತೋಚದೆ ಮುಂದೇನೆಂದು ಅಳುತ್ತ ಕುಳಿತಿರುವಾಗ ಸಾಂತ್ವನ ಗೈಯುವ ಪಾತುಮ್ಮಜ್ಜಿ .ಪಕ್ಕದ ಮನೆಯ ಗುಡಿಸಲಿನಲ್ಲಿ ವಾಸಿಸುವಳಾಗಿರುತ್ತಾಳೆ. ಶಿಕ್ಷಣದಿಂದ ವಂಚಿತಳಾಗಿದ್ದರೂ ಬದುಕನ್ನು ಹೇಗೆ ಕಟ್ಟಿಕೊಳ್ಳಬಹುದೆಂಬುದರ ಕುರಿತು ಪಕ್ವಗೊಂಡ ಮನಸ್ಸು ಅಜ್ಜಿಯದಾಗಿತ್ತು. ದಿಕ್ಕು ಕಾಣದೆ ಗಂಡು ದಿಕ್ಕಿಲ್ಲದ ಹೆಣ್ಣುಗಳಿಗೆ ಹೊರಗಿನ ಉದ್ಯೋಗದ ದಾರಿಯನ್ನು ತಿಳಿಸುವ ಮೂಲಕ ಅವರ ಬದುಕಿಗೊಂದು ಭದ್ರ ಬುನಾದಿಯನ್ನು ದೊರಕಿಸುವವಳಾಗಿ ಸಮಾಜದ ಆಸರೆಯಾಗಿ ಆ ಅಜ್ಜಿ ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಇಂತಹ ಸಮಸ್ಯೆಯನ್ನು ಎದುರಿಸಿದವರಲ್ಲಿ ಸಕೀನಾ ಒಬ್ಬಳಲ್ಲ. ಯಾಕೆಂದರೆ ಇಂತಹ ಎಷ್ಟೋ ಪ್ರಸಂಗಗಳು ಆ ಊರಲ್ಲಿ ನಡೆದುಹೋಗಿತ್ತು. ಪುರುಷಪ್ರಧಾನ ವ್ಯವಸ್ಥೆಯೊಳಗೆ ಹೆಣ್ಣೊಬ್ಬಳು ಸಿಕ್ಕಿ ಬಲಿಪಶುವಾಗುವುದು ಸರ್ವೇ ಸಾಮಾನ್ಯವಾದ ವಿಷಯದಂತಿತ್ತು. ಹೀಗೆ ಶ್ರೀಮಂತರ ಮನೆಯಲ್ಲಿ ಕೆಲಸ ಮಾಡುತ್ತಾ ಬಾಣಂತಿಯರ ಆರೈಕೆ

ಮಾಡುತ್ತಾ ಸಕೀನಾ ತನ್ನ ಬದುಕನ್ನು ಮಗಳೊಂದಿಗೆ ಕಳೆಯುತ್ತಿದ್ದಳು. ನಸೀಮಾಳಿಗೆ ಹತ್ತು ವರ್ಷವಾದಾಗ ಸಕೀನಾಳಿಗೆ ಮಗಳ ಮದುವೆಯ ಚಿಂತೆ. ಯಾಕೆಂದರೆ ನಸೀಮಾಳಿಗೆ ತಂದೆಯಿಲ್ಲ. ಅವಳ ತಂದೆ ಹೆಂಡತಿಯನ್ನು ತೊರೆದು ಬೇರೆ ಮದುವೆಯಾಗಿದ್ದಾನೆ. ಒಬ್ಬಂಟಿಯಾದ ನಸೀಮಾ ಮಗಳನ್ನು ಕಷ್ಟಪಟ್ಟು ಸಾಕುತ್ತಾಳೆ.ಅಂತೆಯೇ ಆಕೆ ನಸೀಮಾಳಿಗೆ ಹದಿನಾಲ್ಕು ವರ್ಷ ತುಂಬುವುದರೊಳಗಾಗಿ ತನ್ನಣ್ಣ ಅಬ್ದುಲ್ ಖಾದರ್ ನ ಸಹಾಯದಿಂದ ಲಾರಿ ಡ್ರೈವರ್ ಅನ್ವರ್ ಪಾಷಾ ನೊಂದಿಗೆ ಮದುವೆ ಮಾಡಿಸುತ್ತಾಳೆ. ಗೊಂಬೆಯಾಟ ಆಡಿಕೊಂಡು ಪ್ರಕೃತಿಯಲ್ಲಿ ಕುಣಿದು ಕುಪ್ಪಳಿಸುತ್ತಿದ್ದ ಬಾಲೆ ಪಾಷಾನನ್ನು ಮದುವೆಯಾಗಿ, ಮುಂದೆ ಖತೀಜಮ್ಮನಂತಹ ಸಂಪ್ರದಾಯದ ಅತ್ತೆಯ ಕೈಯಲ್ಲಿ ಬಂಧಿತಳಾಗುತ್ತಾಳೆ. ಮದುವೆಯಾದ ನಂತರ ಅತ್ತೆಯ ಮನೆಯಲ್ಲಿ ನಸೀಮಾ ತೀವ್ರವಾದ ಬೇಗುದಿಯಲ್ಲಿ ಬಳಲುತ್ತಾಳೆ. ಗಂಡನ ಮನೆಯಲ್ಲಿನ ಬಡತನ, ಸುತ್ತಮುತ್ತಲಿನ ಕೊಳಕುತನ, ಅತ್ತೆಯ ಕ್ರೂರತನ, ಸಣ್ಣತನಗಳಿಂದ ನಸೀಮಾ ನೋವಿನ ಕುಲುಮೆಯಲ್ಲಿ ಸಿಕ್ಕಿ ತತ್ತರಿಸುತ್ತಾಳೆ. ಹದಿನಾಲ್ಕು ವರ್ಷದಲ್ಲಿ ಒಂದು ಮಗುವಿನ ತಾಯಿಯಾಗುತ್ತಾಳೆ. ಇಲ್ಲಿ ಮುಸ್ಲಿಂ ಜನಾಂಗದಲ್ಲಿ ಹೆಣ್ಣುಗಳಿಗೆ ಮದುವೆಯಾಗಲು ನಿರ್ದಿಷ್ಟ ವಯಸ್ಸಿನ ಮಿತಿಗಳಿರುವುದಿಲ್ಲ. ಅವರನ್ನು ಹತ್ತು- ಹನ್ನೆರಡು ವರ್ಷಕ್ಕೆ ಮದುವೆ ಮಾಡಿ ಬಿಡುತ್ತಾರೆ. ಹೆಣ್ಣು ಮಕ್ಕಳು ದೊಡ್ಡವರಾದ ನಂತರ ಹೆಚ್ಚು ದಿನ ಇಟ್ಟುಕೊಳ್ಳಬಾರದು ಹಾಗಾಗಿ ತಮ್ಮ ಮಗಳ ಮದುವೆ ಮಾಡಬೇಕೆಂಬ ಒಂದೇ ಉದ್ದೇಶದಿಂದ ಸರಿಯಾದ ಒಳ್ಳೆಯ ವರನನ್ನು ಹುಡುಕದೇ,ಯಾವುದೋ ಒಂದು ಗಂಡಿಗೆ ಮದುವೆ ಮಾಡಿಬಿಡುತ್ತಾರೆ.

ಅವನ ಗುಣಾವಗುಣಗಳನ್ನು ಪರಾಮರ್ಶಿಸುವುದಿಲ್ಲ. ಮದುವೆಯಾಗಿ ಒಂದು ವರ್ಷ ತುಂಬುವುದರೊಳಗೆ ಆಕೆ ಒಂದು ಹೆಣ್ಣುಮಗುವಿನ ತಾಯಿಯಾಗಿರುತ್ತಾಳೆ. ಆಕೆ ಪಟ್ಟ ಪ್ರಸವ ವೇದನೆಯನ್ನು ಗಂಡನಾಗಲೀ, ಅತ್ತೆ ಯಾಗಲೀ ಅರ್ಥಮಾಡಿಕೊಳ್ಳುವುದಿಲ್ಲ. ಆಕೆಯನ್ನು ಒಂದು ಭೋಗದ ವಸ್ತುವಾಗಿ ನೋಡುತ್ತಾರೆಯೇ ವಿನಃ ಆಕೆಯ ಮಾನಸಿಕ ದೈಹಿಕ ವೇದನೆಯನ್ನು ಅರ್ಥಮಾಡಿಕೊಳ್ಳುವವರಾಗಿರುವುದಿಲ್ಲ.

ಸಕೀನಾಳ ಅಣ್ಣ ಕುಳಿತು ತಿನ್ನುವವನಾಗಿರುತ್ತಾನೆ. ಹಾಗಾಗಿಯೇ ಸಕೀನಾ ತನ್ನ ಮಗಳ ಮೇಲಿನ ಕಾಳಜಿಯಿಂದ "ಅಲ್ಲ ಅಣ್ಣ ನಾನು ಹೆಣ್ಣು ಹೆಂಗಸು ದುಡಿದು ತಂದಿದ್ದನ್ನು ಗಂಡಸಾದವನು ಕೂತು ತಿನ್ನುವುದಕ್ಕೆ ನಾಚಿಕೆಯಾಗೋದಿಲ್ಲವೇ? ನಾನು ತಂದಿದ್ದನ್ನೆಲ್ಲ ನಿಮ್ಮ ಹೊಟ್ಟೆಗೆ ಸುರಿದರೆ ಸಾಕೆ? ನನ್ನ ಮುಂದೆ ಒಂದು ಹೆಣ್ಣು ಹುಡುಗಿಯನ್ನು ನೋಡಿದ್ದೀಯಲ್ಲ? ಈ ಹುಡುಗಿಯನ್ನು ಯಾರ ಕೊರಳಿಗಾದರೂ ಕಟ್ಟಬೇಡವೆ? ಏನೂ ಕೊಡದೆ ಯಾರಾದರೂ ಸುಮ್ಮನೆ ಮದುವೆಯಾಗುತ್ತಾರೆಯೇ?"(ಸಾರಾ ಅಬೂಬಕರ್,೧೯೮೫,ಪುಟ ೫) ಎನ್ನುವ ಮಾತು ಅವಳ ಬಡತನದ ದಟ್ಟ ದಾರಿದ್ರ್ಯತೆಯನ್ನು ಹೇಳುವುದರ ಜೊತೆಗೆ ಹೆಣ್ಣೊಬ್ಬಳನ್ನು ಮನೆಯಿಂದ ದಾಟಿಸಬೇಕಾದರೆ ಮೈತುಂಬಾ ಬಂಗಾರ ಹಾಗೂ ವರದಕ್ಷಿಣೆಯ ಅಗತ್ಯತೆಯ ಕುರಿತು ಮಾತಾಡುವಂತಿದೆ.ಆದರೆ ಸಕೀನಾಳು ಕಷ್ಟಪಟ್ಟು ಸಂಪಾದಿಸಿದ್ದೆಲ್ಲವೂ ವ್ಯರ್ಥವಾಗಿ ಖರ್ಚಾಯಿತು ಎನ್ನುವಂತಾಯಿತು ನಸೀಮಾಳ ಬದುಕು. ಸಾಕಾಗದ್ದಕ್ಕೆ ನಸೀಮಾ ತಾನು ಕಷ್ಟಪಟ್ಟು ಕಟ್ಟಿದ ಬೀಡಿಯ ಸಂಪಾದನೆಯೂ ಅತ್ತೆಯ ಪಾಲಾಯಿತು. ನಸೀಮಾಳ ಗಂಡ ತನ್ನ ಹೆಂಡತಿಯನ್ನು ಅರ್ಥ ಮಾಡಿಕೊಳ್ಳದ ಕಾರಣ ಆಕೆಯ ಆಸೆಗಳೆಲ್ಲಾ ನುಚ್ಚು ನೂರಾದವು. ಆರಂಭದಲ್ಲಿ ಸ್ವಲ್ಪವಾದರೂ ನಸೀಮಾಳ ಜೊತೆಗೆ ಪಾಲುದಾರನಾಗಿ ಮಾತಾಡುತ್ತಿದ್ದ ಪಾಷಾ ಇದ್ದಕ್ಕಿದ್ದ ಹಾಗೆ ತಾಯಿ ಖತೀಜಮ್ಮಳ ಒರಟು ಮಾತಿನೆದುರು ಮೂಕ ನಾಗಬೇಕಾಯಿತು. ನಸೀಮಾ ಬಾಲ್ಯದಲ್ಲಿ ಕಂಡ ಮೂರು ಕನಸುಗಳು ಗಂಡನ ಮನೆಯಲ್ಲಿ ನನಸಾಗಲೇ ಇಲ್ಲ. ಹೆಣ್ಣಿನ ಕನಸುಗಳಿಗೆ ಯಾವುದೇ ಬೆಲೆಯಿಲ್ಲ ಎನ್ನುವುದರ ಅರಿವು ಮುಗ್ಧ ನಸೀಮಾಳಿಗೆ ಅರ್ಥವಾಗುತ್ತಾ ಬಂತು. ಮೊದಲ ಮಗು ಜ್ವರದಿಂದ ಬಳಲಿದರೂ ಕ್ರೂರಿ ಅತ್ತೆಯ ಮೌಢ್ಯಕ್ಕೆ ಬಲಿಯಾಗುತ್ತದೆ.ಎರಡನೇ ಮಗು ರೋಸಿ ಅತ್ತೆ- ಗಂಡನ ತಿರಸ್ಕಾರಕ್ಕೆ ಗುರಿಯಾಗುತ್ತದೆ. ಮೊದಲ ಮಗು ಸತ್ತಾಗಲೂ ತವರು ಮನೆಗೆ ದುಃಖ ಕಳೆಯಲು ಕಳಿಸದ ಅತ್ತೆ ಕಾದಂಬರಿಯೊಳಗೆ ಮತ್ತಷ್ಟು ಕ್ರೂರಿಯಾಗಿ ಕಾಣಿಸುತ್ತಾಳೆ. ಅಲ್ಲದೆ ವರ್ಷಕ್ಕೊಂದರಂತೆ ಮಕ್ಕಳನ್ನು ಹೊಟ್ಟೆಯಲ್ಲಿಟ್ಟಾಗಲೂ ಸ್ವಲ್ಪವೂ ವಿಶ್ರಾಂತಿ ಸಿಗದೆ ನಸೀಮಾ ಬಳಲುವಂತಾಗುತ್ತದೆ.ತಾಯಿ ಕರುಳು ಎಷ್ಟೇ ನೋವಾದರೂ ಸಾಂಪ್ರದಾಯಿಕ ಮನಸ್ಥಿತಿಯ ವಳಂತೆಯೇ "ಗಂಡನ ಮನೆಯಲ್ಲಿ ಹೊಂದಿಕೊಂಡು ಹೋಗು" ಎನ್ನುವ ಮಾತು ನಸೀಮಾ ಎಷ್ಟೊಂದು ಸಹನಾಮಯಿ ಎಂಬುದನ್ನು

ತೋರಿಸುವಂತಿದೆ. 'ಹೆಣ್ಣಿಗೆ ಭೂಮಿಯಷ್ಟು ಸಹನೆ ಇರಬೇಕು' ಎನ್ನುವ ತಾಯಿಯ ಮಾತು ನಸೀಮಾಳಿಗೆ ಎಂಥ ಕಷ್ಟದ ಸಂದರ್ಭದಲ್ಲೂ ಆಕೆ ಮರು ಮಾತಾಡದಂತೆ ಬಾಯಿ ಕಟ್ಟಿಸಿತ್ತು. ಆದರೆ ಯಾವಾಗ ಪತಿ ರೋಗಗ್ರಸ್ಥ ಹೆಂಡತಿಯನ್ನು ಮರೆತು ಇನ್ನೊಂದು ಮದುವೆಯಾಗಿ ಅವಳೊಡನೆ ಸಂಸಾರ ಮಾಡಲು ಆರಂಭಿಸಿದನೋ ಆವತ್ತಿನಿಂದ ಅವಳ ಸಹನೆ ಕಟ್ಟೆಯೊಡೆಯಿತು. ಇನ್ನು ಎಲ್ಲವನ್ನು ಸಹಿಸದಾದಳು ನಸೀಮಾ. ಆದರೆ ಎದ್ದು ನಿಲ್ಲುವ ಶಕ್ತಿಯನ್ನೇ ಆಕೆ ಕಳಕೊಂಡಿದ್ದಳು. "ತನ್ನೆದೆಯಲ್ಲಿ ಹೊತ್ತಿ ಉರಿಯುತ್ತಿರುವ ಈ ದಾವಾಗ್ನಿ ಈ ಮನೆಯನ್ನು ಇದರಲ್ಲಿರುವವರನ್ನೆಲ್ಲಾ ಸುಟ್ಟು ಭಸ್ಮ ಮಾಡುವಂತಿದ್ದರೆ ಎಷ್ಟು ಚೆನ್ನಾಗಿತ್ತು!"(ಸಾರಾ ಅಬೂಬಕರ್ ,೧೮೫,ಪುಟ ೧೨೮) ಎನ್ನುವಲ್ಲಿ ಆಕೆಯ ಮನಸ್ಸಿನ ತೀವ್ರವಾದ ಪ್ರತಿಭಟನೆ ವ್ಯಕ್ತವಾಗುತ್ತದೆ.

ನಸೀಮ ತನ್ನ ಮಾವನಲ್ಲಿ ತಾಯಿಯನ್ನು ಎಲ್ಲಿದ್ದರೂ ಕರೆದುಕೊಂಡು ಬನ್ನಿ.ತಾನು ಸಾಯುವುದಂತೂ ಖಚಿತ ಎಂದಾಗ ಆತ ಕೂಡಲೇ ಸಕೀನಾಳನ್ನು ಮಗಳ ಬಳಿ ಕರೆತಂದಿದ್ದ.ಮಗಳ ಅವಸ್ಥೆ ಯನ್ನು ಕಣ್ಣಾರೆ ಕಂಡ ತಾಯಿಯ ಸಹನೆ ಕಟ್ಟೆಯೊಡೆಯಿತು." ನನ್ನ ಮಗಳ ಕಾಯಿಲೆ ಜಾಸ್ತಿಯಾಗಿದೆಯೆಂದು ನನಗೆ ಒಂದು ಮಾತು ಬಿಡಿಸಬಹುದಾಗಿತ್ತಲ್ಲ? ಸತ್ತಾಗ ಗೋರಿ ತೋಡಿ ಹಾಕಿಬಿಟ್ಟರೆ ನಿಮ್ಮ ಕೆಲಸ ಮುಗಯಿತು ತಾನೇ? ಇಂದೋ ನಾಳೆಯೋ ಸಾಯುವಂತಿದ್ದಾಳೆ. ಅವಳು ಸತ್ತ ಮೇಲೆ ನಿಮ್ಮ ಮಗ ಎರಡನೆ ಮದುವೆ ಮಾಡಿ ಕೊಳ್ಳಬಹುದಾಗಿತ್ತಲ್ಲ? ಅವಳನ್ನು ಈ ಸ್ಥಿತಿಯಲ್ಲಿಟ್ಟು ಇನ್ನೊಬ್ಬಳನ್ನು ತರಲು ನಿಮಗೆ ಹೇಗೆ ಮನಸ್ಸು ಬಂತು? ನನ್ನ ಮಗಳು ನಿಮಗೇನು ಕೇಡು ಬಗೆದಿದ್ದಳು?".(ಸಾರಾ ಅಬೂಬಕರ್,೧೯೮೫,ಪುಟ೧೩೪) ಎನ್ನುವಲ್ಲಿ ಅವಳ ದುಃಖದ ಉರಿ ಹೊರಬಂದಿತ್ತು. ಎಂಥಹಾ ತಾಯಿಯಾದರು ಇಂತಹ ಸನ್ನಿವೇಶದಲ್ಲಿ ಮಾತನಾಡದಿರಳು."ನನ್ನ ಮಗಳ ಹೊಟ್ಟೆ ಉರಿಸಿದ್ದಕ್ಕೆ ದೇವರೇ ನಿಮಗೆ ಶಿಕ್ಷೆ ಕೊಡಲಿ"(ಸಾರಾ ಅಬೂಬಕರ್ ,೧೯೮೫,ಪುಟ ೧೩೫) ಎನ್ನುವಲ್ಲಿ ಹೆಣ್ಣೊಬ್ಬಳ ಒಡಲಿನ ನೋವು ಅದು ಶಾಪವಾಗಿ ಪರಿಣಮಿಸಿತ್ತು.ಕ್ಷಯರೋಗದಿಂದ ನರಳುತ್ತಿದ್ದವಳಿಗೆ ಸೈತಾನ್ ಸೇರಿದೆ ಎಂದು ತಟ್ಟೆಯಲ್ಲಿ ಬರೆದು ಕುಡಿಸಿದ್ದು ನೆನಪಾಗಿ ತನ್ನನ್ನು ತಾನೇ ಹಳಿದುಕೊಳ್ಳುತ್ತಾಳೆ ಸಕೀನಾ. ಇಲ್ಲಿ ತಾಯಿ- ಮಗಳ ವೈಚಾರಿಕ ಪ್ರಜ್ಞೆ ಕಾದಂಬರಿಯ ಮಧ್ಯೆ ಮಧ್ಯೆ ಜಾಗ್ರತವಾಗುತ್ತಿದ್ದರೂ ಪತಿ ಮತ್ತು ಅತ್ತೆಯ ಮೌಢ್ಯ ಅವರ ಅರಿವನ್ನು ಇನ್ನಿಲ್ಲದಂತೆ ತಿಂದು ಮುಕ್ಕಿತ್ತು. ನಸೀಮಾ ಎರಡನೇ ಮಗಳು ರೋಸಿ ಅವಳ ಬದುಕಿನ ಸರ್ವಸ್ವವಾಗಿದ್ದಳು. ಯಾಕೆಂದರೆ ಸತ್ತ ಮೊದಲ ಮಗಳು ಬೀಬೀಯ ಸ್ಥಾನವನ್ನು ಈಕೆಯೇ ತುಂಬಿದ್ದಳು.ಅಲ್ಲದೆ ಅತ್ತೆಯ ಕ್ರೂರದೃಷ್ಟಿಗೆ ಸದಾ ಸಿಲುಕಿದವರಳಾಗಿದ್ದಳು. ಹಾಗಾಗಿಯೇ ಬತ್ತಿದ ಬದುಕಿನಲ್ಲಿ ಭರವಸೆಯ ಕಿರಣವನ್ನು ಮೂಡಿಸಿದ ಆ ಮಗುವಿಗಾಗಿ ನಸೀಮಾ ಒಂದು ನಿರ್ಧಾರಕ್ಕೆ ಬರುತ್ತಾಳೆ. "ಏನೇ ಆದರೂ ತಾನು ಸಾಯಬಾರದು. ತನ್ನ ಈ ಮಗಳಿಗಾಗಿ ತಾನು ಬದುಕಲೇ ಬೇಕು. ತನ್ನ ಗಾಡಾಂಧಕಾರ ಕವಿದ ಬಾಳಿನಲ್ಲಿ ಒಂದೇ ಒಂದು ಬೆಳಕಿನ ಕಿರಣ ಈ ಮಗಳು. ಅವಳನ್ನು ಸಾಕಿ ಸಲಹಿ ದೊಡ್ಡವಳಾಗಿ ಮಾಡಿ ಅವಳಿಗೊಂದು ನೆಲೆ ಕಾಣಿಸುವುದು ತನ್ನ ಕರ್ತವ್ಯ ತಾನು ಬದುಕಲೇ ಬೇಕು"(ಸಾರಾ ಅಬೂಬಕ್ಕರ್,೧೯೮೫,ಪುಟ ೧೩೮) ಎನ್ನುವಲ್ಲಿ ಲೇಖಕಿ ನಿಜ ಜೀವನದಲ್ಲಿ ಮರಣವನ್ನು ಕಂಡ ಕಥಾ ನಾಯಕಿಯನ್ನು ಕಾದಂಬರಿಯಲ್ಲಿ ಉಳಿಸುವ ಪ್ರಯತ್ನ ಮಾಡಿದ್ದಾರೆ.ಆಕೆ ಛಲ ತೊಟ್ಟು ಬದುಕಿ ವ್ಯವಸ್ಥೆಗೆ ಉತ್ತರವನ್ನು ನೀಡುವವಳಾಗಿ ಮಾಡುವ ಮೂಲಕ ಸಮಾಜ ಬದಲಾಗಬೇಕಾಗಿದೆ. ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಹಾಗಾಗಿಯೇ ತಾಯಿಯ ಆರೈಕೆಯಿಂದ ಮತ್ತೆ ಪುನರ್ಜನ್ಮ ಪಡೆದು ಕೊಂಡ ನಸೀಮಾನನ್ನು ಪತಿ ಏನೂ ಆಗಿಲ್ಲ ಎನ್ನುವಂತೆ ಮತ್ತೆ ಕರೆಯಲು ಬಂದಾಗ ಆಕೆ ಆತನನ್ನು ತಿರಸ್ಕರಿಸುತ್ತಾಳೆ. ಗಂಡನ ಯಾವುದೇ ಬೆದರಿಕೆಯ ನುಡಿಗೂ ಬಗ್ಗದೇ ಬದುಕುವ ಛಲ ತೊಡುತ್ತಾಳೆ. ಇಲ್ಲಿ ಆಕೆ ಸಾಂಪ್ರಾಯಿಕ ವ್ಯವಸ್ಥೆ ಹಾಕಿಕೊಟ್ಟ ಚೌಕಟ್ಟನ್ನು ಮೀರಿ ಬೆಳೆಯುವ ರೀತಿಯನ್ನು ಕಾಣಬಹುದು. ಮುಗ್ಧೆ ಯಾಗಿದ್ದ ನಸೀಮಾ ಇಡೀ ಸಮುದಾಯದ ವ್ಯವಸ್ಥೆಯನ್ನು ಅಲ್ಲಾಡಿಸುವವಳಾಗಿ ಕಾಣಿಸುತ್ತಾಳೆ. ಸಾಂಪ್ರದಾಯಿಕ ಬೇರುಗಳನ್ನು ಸಂಪೂರ್ಣವಾಗಿ ಕಿತ್ತು ಪ್ರಗತಿಪರ ಸಮಾಜದ ಬೆಳವಣಿಗೆಗೆ ಬೇಕಾದ ಆರೋಗ್ಯಪೂರ್ಣ ಯೋಚನೆಯಂತೆ ನಸೀಮಾಳ ಉದ್ದೇಶ ಗೋಚರವಾಗುತ್ತದೆ. ಇಲ್ಲಿ ಸಂಪ್ರದಾಯ, ಮೌಢ್ಯ, ಅಜ್ಞಾನ,ಬಡತನಗಳಲ್ಲಿ ಸಿಕ್ಕಿ ನರಳಿದ ಹೆಣ್ಣೊಂದು ಕೊನೆಗೆ ಸ್ವತಂತ್ರವಾಗಿ ಆಲೋಚನೆ ಮಾಡುವುದು, ಬದುಕಲು ಹಾತೊರೆಯುವುದು ದಿನನಿತ್ಯ ಕೊಂದು ತಿನ್ನುವ ಸಮಾಜ ವ್ಯವಸ್ಥೆಯ, ವಿಷವರ್ತುಲದಿಂದ

ದೂರ ಸರಿಯುವುದು ಆತ್ಮಾಭಿಮಾನದಿಂದ ತಲೆಯೆತ್ತಿ ಬದುಕುವುದು ಇಲ್ಲಿ ತೀರ ಮುಖ್ಯವೆನಿಸುತ್ತದೆ.

**ಧರ್ಮ :** ಧರ್ಮದ ಕಟ್ಟುಪಾಡುಗಳಲ್ಲಿ ಬಂಧಿತರಾಗಿದ್ದು, ಸಾರಸ್ವತ ಲೋಕದಿಂದ ದೂರ ಉಳಿದಿದ್ದ ಮುಸ್ಲಿಂ ಹೆಣ್ಣುಮಕ್ಕಳ ನೋವು ನಲಿವುಗಳನ್ನು ಕಥಿಸಲು ಸಾರಾ ಅಬೂಬಕ್ಕರ್ ಮನಸ್ಸು ಮಾಡಿದ್ದು ಕನ್ನಡದ ಅದೃಷ್ಟ ಎನ್ನಬೇಕು. ಮುಸ್ಲಿಂ ಸಮಾಜದ ಬದುಕು ಧರ್ಮದ ನಿಯಮಗಳಡಿಯಲ್ಲಿಯೇ ನಡೆಯುವುದನ್ನು ಸಾರ ಸೆರೆ ಹಿಡಿಯುವ ಪ್ರಯತ್ನ ಮಾಡಿದ್ದಾರೆ. ಆದರೆ ಈ ನಿಯಮಗಳ ಭಾರ ಹೆಣ್ಣಿನ ಮೇಲೆ ಹೆಚ್ಚು ಬೀಳುತ್ತದೆ. ಹಿಂದೂ ಸಮಾಜದಲ್ಲಿರುವಂತೆ ಮುಸ್ಲಿಂ ಸಮಾಜದ ಒಳಗಿನ ಪುರುಷ ಕೇಂದ್ರಿತ ಆಶಯಗಳು ಸ್ತ್ರೀ ಸಮಾಜ ಜೀವಿ ಎಂಬುದನ್ನು ನಿರ್ದಾಕ್ಷಿಣ್ಯವಾಗಿ ಹೊಸಕಿ ಹಾಕುತ್ತದೆ. ಧರ್ಮದ ಒಳಗೆ ಸ್ತ್ರೀಯರ ಬದುಕು ಪುರುಷನಿಗೆ ಪೂರಕವಾಗಿ ರೂಪಿತಗೊಂಡಿರುತ್ತವೆಯೇ ವಿನಃ ಸ್ವತಂತ್ರ್ಯವಾಗಿ ಅಲ್ಲ. ಇದರಲ್ಲಿ ಮಾನವೀಯತೆಯ ಜಿಜ್ಞಾಸೆ ಯಾವುದೇ ಕಾಲ ಸಂದರ್ಭಗಳಲ್ಲೂ ಏಳುವುದಿಲ್ಲ. ಮುಸ್ಲಿಂ ಸಮಾಜ ಈ ಅರ್ಥದಲ್ಲಿ ಸಂಪೂರ್ಣವಾಗಿ ಪುರುಷಮಯ. ಸ್ತ್ರೀಗೆ ಅವಳ ಬದುಕಿಗೆ ಸ್ಥಾನ ಕಲ್ಪಿಸುವ ಸನ್ನಿವೇಶವೇ ಇದರೊಳಗೆ ಎದುರಾಗುವುದಿಲ್ಲ.ಧರ್ಮವನ್ನೇ ಎದುರು ಮಾಡಿಕೊಂಡು ಬದುಕಿಗೆ ಅರ್ಥ ಕಂಡುಕೊಳ್ಳಲು ಪ್ರ ಯತ್ನಿಸುವ ಕಾಸರಗೋಡು, ಉಳ್ಳಾಲ, ಮಂಗಳೂರು ಪ್ರದೇಶಗಳಲ್ಲಿ ದಟ್ಟವಾಗಿರುವ ಮಾಪಿಳ್ಳೆ ಮುಸ್ಲಿಂ ಸಮಾಜ "ಸಾರಾ'ಅವರ ಕೃತಿಗಳಲ್ಲಿ ಅನಾವರಣ ಗೊಳ್ಳುತ್ತದೆ. ಇದನ್ನು ಭಾರತೀಯ ಮುಸ್ಲಿಂ ಸಮುದಾಯದ ಜೀವನ ಕ್ರಮಕ್ಕೆ ತೌಲನಿಕಗೊಳಿಸಿ ಗಮನಿಸಬೇಕಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಕುರಾನ್. ಧಾರ್ಮಿಕ ಗ್ರಂಥವನ್ನು ಸಂವಿಧಾನವಾಗಿ ಪರಿಭಾವಿಸಿ ಮಾನ್ಯಮಾಡುವ ಮುಸ್ಲಿಂ ಮಾಪಿಳ್ಳೆ ಜನಾಂಗದ ಜೀವನ ದೃಷ್ಟಿಕೋನ. ಅಶಿಕ್ಷಿತ ಮದ್ರಸಾದ ಶಿಕ್ಷಣವನ್ನಷ್ಟೇ ಹೆಚ್ಚಿನ ಸಂಖ್ಯೆಯಲ್ಲಿ ಪಡೆದು ಯಾವುದಾದರೂ ಸಣ್ಣಪುಟ್ಟ ವೃತ್ತಿಯನ್ನು ಆಧರಿಸಿಕೊಂಡ ಜನವರ್ಗದಲ್ಲಿ ವಿವಾಹ ಒಂದು ಧಾರ್ಮಿಕ ಕಾರ್ಯವಿಧಿ. ಬಹುಪತ್ನಿತ್ವ ಇಸ್ಲಾಂನಲ್ಲಿ ಧರ್ಮ ಸಮ್ಮತವಾದದ್ದು. ಓರ್ವ ವ್ಯಕ್ತಿ ಇಲ್ಲಿ ನಾಲ್ಕು ಪತ್ನಿಯರನ್ನು ಬೇಕಿದ್ದರೂ ಹೊಂದಿರಬಹುದು. ಸಾರಾ ಅವರ 'ಸಹನಾ' ಕಾದಂಬರಿಯಲ್ಲಿ ಅನಾದಿ ಕಾಲದಿಂದ ಇಂದಿನವರೆಗೆ ನಡೆದುಕೊಂಡು ಬಂದಿರುವ ಬಹುಪತ್ನಿತ್ವವೇ ಕಥಾವಸ್ತುವಾಗಿದೆ. ಕಾನೂನಿನ ನಿರ್ಬಂಧವಿರುವ ಹಿಂದೂ ಸಮಾಜದಲ್ಲಿ ಕಾನೂನನ್ನು ಅತಿಕ್ರಮಿಸಿಯೂ ದ್ವಿತೀಯ ವಿವಾಹ ನಡೆಯುತ್ತಲೇ ಇದೆ ಎಂದ ಬಳಿಕ ಕಾನೂನಿನ ಒಪ್ಪಿಗೆಯಿರುವ ಮುಸ್ಲಿಂ ಸಮಾಜದಲ್ಲಿ ಇದೊಂದು ದೊಡ್ಡ ಘಟನೆಯೇನೂ ಅಲ್ಲ. ಸಮಾಜದ ಮೇಲ್ವರ್ಗದ ಜನರಲ್ಲಿ ಇದರ ಹಾವಳಿ ಅಷ್ಟೊಂದಿಲ್ಲದೇ ಹೋದರೂ, ಸಮಾಜದ ಕೆಳವರ್ಗದ ಪುರುಷರಲ್ಲಿ ಇದೊಂದು ಹವ್ಯಾಸವೇ ಆಗಿದೆ. ಇತ್ತೀಚೆಗಂತೂ ಈ ಹಾವಳಿ ತೀರಾ ಜಾಸ್ತಿಯಾಗಿದೆ. ಓರ್ವ ಹೆಂಡತಿ ಮತ್ತು ಮಕ್ಕಳನ್ನು ಸಾಕಲಾರದವನು ಎರಡೋ ಮೂರೋ ಹೆಂಡತಿಯರನ್ನು ಕಟ್ಟಿಕೊಂಡು ತಾವೂ ನರಳುವುದಲ್ಲದೆ, ಈ ಹೆಂಗಸರನ್ನೂ ನರಕದ ಬಾಗಿಲಿಗೆ ನೂಕುವುದು ಈ ಸಮಾಜದ ಕೆಳವರ್ಗದವರಲ್ಲಿ ಕಂಡುಬರುವ ತೀರಾ ಸಾಮಾನ್ಯವಾದ ದೃಶ್ಯವಾಗಿದೆ. ದ್ವಿತೀಯ ವಿವಾಹವಾಗುವುದು ಧರ್ಮ ಸಮ್ಮತವೇನೋ ಹೌದು.ಆದರೆ ಕೆಲವರು ಈ ಸಂದರ್ಭದಲ್ಲಿ ಎಷ್ಟೊಂದು ಅಮಾನವೀಯವಾಗಿ ವರ್ತಿಸುತ್ತಾರೆ ಎಂಬುದನ್ನು ಈ ಕಾದಂಬರಿ ಚಿತ್ರಿಸುವ ಉದ್ದೇಶವನ್ನು ಹೊಂದಿದಂತಿದೆ.

ಮುಸ್ಲಿಂ ಸಮಾಜದ ಬದುಕು ಧರ್ಮದ ಹೆಸರಿನಲ್ಲೇ ನಿಲ್ಲುವುದನ್ನು ನಾವು ಕಾದಂಬರಿಗಳಲ್ಲಿ ಗುರುತಿಸಬಹುದು. ಸಹಾ ಕಾದಂಬರಿಯಲ್ಲಿ ಗಂಡನಿಂದ ದೂರಾದ ಸಕೀಅ ಮಗಳ ಮದುವೆ ಮಾಡಲು ಎಲ್ಲಾ ತಯಾರಿ ತನ್ನ ದುಡಿದ ಹಣದಿಂದಲೇ ನಡೆಸಬೇಕಾಗಿ ಬಂದರೂ ಗಂಡನ ಸಂಬಂಧಿಕರೆಂದು ತಮ್ಮನನ್ನು ಕರೆದಾಗ ಆತ "ಈಗಿನ ಕಾಲದಲ್ಲಿ ನ್ಯಾಯ ಎಲ್ಲಿದೆ? ನಾನು ಬಂದು ನಿಕಾಹ್ ಗೆ ಕುಳಿತುಕೊಳ್ಳಬೇಕಾದರೆ ನನಗೆ ಇಪ್ಪತ್ತೈದು ರೂಪಾಯಿ ಕೊಡಬೇಕು ಎಂದು ಬರಹೋಗುವ ಖರ್ಚನ್ನು ಕೊಡಬೇಕು.ಬರಹೋಗುವ ಖರ್ಚನ್ನೂ ಕೊಡಬೇಕು" (ಸಾರಾ ಅಬೂಬಕರ್,೧೯೮೫, ಪುಟ೨೫) ಎನ್ನುವಲ್ಲಿ ಕೂಡಾ ಧರ್ಮದ ಹೆಸರಿನಲ್ಲಿ ಈ ಗಂಡಸರು ತನ್ನನ್ನು ಎಷ್ಟೊಂದು ಸುಲಿಗೆ ಮಾಡುತ್ತಾರೆ ಎಂದು ಸಂಕಟಪಟ್ಟುಕೊಳ್ಳುತ್ತಾಳೆ ಸಕೀನಾ. ಆದರೆ ತನ್ನ ಮಗಳಿಗೆ ಗಂಡನ ಮನೆಯಲ್ಲಿ ಗೌರವ ಕಡಿಮೆಯಾಗಬಾರದೆಂದು ಹಣವನ್ನು ಖರ್ಚು ಮಾಡಲು ಮುಂದಾಗುತ್ತಾಳೆ. ಆದರೆ ಅವಳು ತಿಳಿದಂತೆ ಯಾವ ಮರ್ಯಾದೆಯೂ ಮಗಳಿಗೆ ದೊರೆಯಲಿಲ್ಲ ಎನ್ನುವುದೇ ಕಾದಂಬರಿಯ ದುರಂತ. ನಸೀಮಾ ಮದುವೆಯಾಗಿ ಗಂಡನ ಮನೆಯಲ್ಲಿ ಬಂಧನದಂತಿದ್ದಳು. ಬೇಸರವಾದಾಗ ಹೊರಗಡೆ ಮೈದಾನದಲ್ಲಿ ಕಾಲಾಡಿಸಿ ಬರಬೇಕೆಂದು ಕೊಂಡರೂ "ಮುಸ್ಲಿಂ

ಹೆಂಗಸರು ಹಾಗೆಲ್ಲ ಮನೆಯಿಂದ ಹೊರಗೆ ಓಡಾಡಬಾರದು, ಬೇರೆ ಗಂಡಸರೆದುರು ಕಾಣಿಸಿಕೊಳ್ಳಬಾರದು. ಹಾಗೆಲ್ಲ ಓಡಾಡಿದರೆ ಗೌರವವಿರುವುದಿಲ್ಲ".(ಸಾರಾ ಅಬೂಬಕ್ಕರ್ ,೧೯೮೫,ಪುಟ ೪೬)ಎಂದು ಅತ್ತೆ ಕಟ್ಟಪ್ಪಣೆ ಮಾಡಿರುವುದು ಅದು ಧರ್ಮದ ಹೆಸರಿನಲ್ಲೇ.

ಮೊದಲ ಮಗುವಿಗೆ ಜೋರಾಗಿ ಜ್ವರ ಬಂದಾಗಲೂ ಡಾಕ್ಟರ ಬಳಿ ಕರೆದುಕೊಂಡು ಹೋಗದೆ ಪಂಡಿತರ ಔಷಧಿಯಲ್ಲೇ ನಂಬಿಕೆ ಇಟ್ಟಿದ್ದು ಧರ್ಮದ ಹೆಸರಿನಲ್ಲೇ. ಹೆಂಗಸರಾರೂ ಡಾಕ್ಟರ ಬಳಿ ಹೋಗಬಾರದೆಂಬುದು ಆ ಸಮುದಾಯದ ನಿಷಿದ್ಧವಾಗಿತ್ತು.ಅಲ್ಲದೆ ಮಗುವಿನ ಸ್ಥಿತಿ ಗಂಭೀರವಾದಾಗ ನಸೀಮಾ ಬೆಚ್ಚಿ" ಯಾ ಅಲ್ಲಾ,ಈ ರಾತ್ರಿ ಬೆಳಗಾದರೆ ಸಾಕು ನಾನೇ ಇವಳನ್ನೆತ್ತಿಕೊಂಡು ಡಾಕ್ಟ್ರ ಬಳಿ ಹೋಗುತ್ತೇನೆ. ಇವಳಿಗೆ ಏನೂ ಆಗದಿರಲಿ ಇವಳು ಹುಷಾರಾದರೆ ಉಳ್ಳಾಲದ ದರ್ಗಾಕ್ಕೆ ಇವಳ ನ್ನೆತ್ತಿಕೊಂಡು ಹೋಗಿ ಇವಳ ಕೈಯಲ್ಲಿ ಒಂದು ಬಿಳಿ ಬಟ್ಟೆಯನ್ನು ದರ್ಗದ ಮೇಲೆ ಹಾಸುತ್ತೇನೆ."(ಸಾರಾ ಅಬೂಬಕರ್ ,೧೯೮೫,ಪುಟ೮೮) ಎನ್ನುವಲ್ಲಿಯೂ ದೇವರ ಮೇಲಿನ ನಂಬಿಕೆ ಬಲವಾಗಿತ್ತೇ ಹೊರತು ಮಗುವನ್ನು ಉಳಿಸಿಕೊಳ್ಳಲಾಗಲಿಲ್ಲ.

ಎರಡೂ ಬಾರಿಯೂ ಹೆಣ್ಣು ಹೆತ್ತಳೆಂದು ಪತಿ ಮತ್ತು ಅತ್ತೆ ತಿರಸ್ಕಾರದಿಂದ ನುಡಿದಾಗ ಅಲ್ಲೇ ನಿಂತಿದ್ದ ಸಕೀನಾ ಸಹಿಸಲಾರದೆ "ಹೆಣ್ಣುಮಗುವನ್ನು ಅವಳು ಬೇಕೆಂದೇ ಹಡೆದಿದ್ದಾಳೆಯೇ?ಅಲ್ಲಾಹು ತಾನೇ ಅದನ್ನು ಅವಳ ಹೊಟ್ಟೆಯಲ್ಲಿ ಹುಟ್ಟಿಸಿದ್ದು? ಅಲ್ಲಾಹುವಿನ ಬಳಿ ನಾವು "ಹೆಣ್ಣು ಮಗುವನ್ನು ಯಾಕೆ ಹುಟ್ಟಿಸಿದೆ" ಎಂದು ಪ್ರಶ್ನೆ ಕೇಳುವಂತಿಲ್ಲವಲ್ಲ? ಈ ಬಾರಿ ಅವಳು ಬದುಕಿದ್ದೇ ದೊಡ್ಡದು"(ಸಾರಾ ಅಬೂಬಕ್ಕರ್ ,೧೯೮೫,ಪುಟ೧೦೧) ಎನ್ನುವಲ್ಲಿಯೂ ಧರ್ಮದೊಳಗಿನ ಮೌಢ್ಯ ಎದ್ದು ಕಾಣಿಸುವಂತಿದೆ. ಇಲ್ಲಿ ಗಂಡು ಮಗುವಿಗೆ ಪ್ರಾಶಸ್ತ್ಯವಿದೆಯೇ ವಿನಹ ಮಾನವೀಯತೆಗೆ ಬೆಲೆಯೇ ಇಲ್ಲ ಎನ್ನುವಂತಾಗಿದೆ.

ಮರಳಿ ಮರಳಿ ಗರ್ಭವತಿಯಾಗುತ್ತಿದ್ದ ನಸೀಮಾ ಳಿಗೆ ಆಗುತ್ತಿದ್ದ ಮಾನಸಿಕ ಮತ್ತು ದೈಹಿಕ ವೇದನೆಗಳು ಅವಳನ್ನು ಕಾಡಲಾರಂಭಿಸಿದಾಗ ಆಕೆ ಪತಿಯೊಡನೆ ಸೂಲಗಿತ್ತಿ ಹೇಳಿದ ಮಾತುಗಳನ್ನು ಹೇಳಿದಾಗ ಆತ ನಕ್ಕುಬಿಟ್ಟು"ಅದೆಲ್ಲ ನಮ್ಮಂತವರಿಗಲ್ಲ ಒಂದು ಮಾಡ ಹೋಗಿ ಇನ್ನೊಂದಾಗುತ್ತದೆ. ಅದೂ ಅಲ್ಲದೆ ನಾವು ಮುಸ್ಲಿಮರು. ನಾವು ಅದನ್ನೆಲ್ಲ ಮಾಡಬಾರದು. ಮೊನ್ನೆ ಮಸೀದಿಯಲ್ಲಿ ನಮ್ಮ ಖಾಜಿ ಸಾಹೇಬರು ಹಾಗೆ ಮಾಡಬಾರದೆಂದು ಸಾರಿ ಸಾರಿ ಹೇಳಿದ್ದಾರೆ. ನೀನು ಹೀಗೆ ಹೇಳಿದೆ ಎಂದು ಉಮ್ಮನಿಗೆ ತಿಳಿದರೆ ನಿನ್ನ ಬೆನ್ನಿನ ಚರ್ಮ ಸುಲಿದು ಬಿಡುತ್ತಾರೆ"(ಸಾರಾ ಅಬೂಬಕರ್,೧೯೮೫,ಪುಟ ೧೦೬) ಎನ್ನುವಲ್ಲಿ ಧಾರ್ಮಿಕ ಹೆಸರಿನಲ್ಲಿ ಅಸಹಾಯಕ ಹೆಣ್ಣೊಬ್ಬಳನ್ನು ಮೌನವಾಗಿರಿಸುವ ಪ್ರಯತ್ನವನ್ನು ಗುರುತಿಸಬಹುದು.

ಆದರೆ ನಾಲ್ಕನೇ ಬಾರಿ ತಾನು ಗರ್ಭಿಣಿಯೆಂದು ತಿಳಿದಾಗ ನಸೀಮಾ ತನ್ನ ಸ್ನೇಹಿತೆ ಮರಿಯಾನಲ್ಲಿ ನನಗೊಂದು ಪರಂಗಿಕಾಯಿ ಎಲ್ಲಿಂದಾದರೂ ತಂದು ಕೊಡೆಂದು ಕೇಳಿದಾಗ ಆಕೆ ಹೀಗೆ ಮಾಡುವುದು ಪಾಪ ಎಂದು ಖತೀಬ್ ಸಾಹೇಬರು ಹೇಳುತ್ತಾರಲ್ಲ ಎಂದಾಗ ಆಕೆಯ ಪ್ರತಿರೋಧದ ಮಾತು" ಖತೀಬ್ ಸಾಹೇಬರಿಗೇನು ಗೊತ್ತು? ಒಂದು ಮಗುವನ್ನು ಒಂಬತ್ತುತಿಂಗಳು ಹೊಟ್ಟೆಯಲ್ಲಿಟ್ಟು ಹಡೆದು ಅವುಗಳನ್ನು ಸಾಕಲು ಎಷ್ಟು ಕಷ್ಟವಿದೆಯೆಂದು? ಈಗ ನನ್ನನ್ನು ನೀನು ನೋಡುತ್ತಾ ಇದ್ದೀಯಾ. ಇನ್ನು ಒಂಬತ್ತು ತಿಂಗಳು ಒಂದು ಮಗುವನ್ನು ಹೊಟ್ಟೆಯಲ್ಲಿಟ್ಟು ನಾನು ಬದುಕುತ್ತೇನೆಯೇ? ನನ್ನ ಕಷ್ಟಕ್ಕೆ ನೆರವಾಗಲು ಖತೀಬ್ ಸಾಹೇಬರು ಬರುತ್ತಾರೆಯೇ?"(ಸಾರಾ ಅಬೂಬಕರ್ ,೧೯೮೫,ಪುಟ ೧೧೭) ಎಂಬುದು ಧಾರ್ಮಿಕ ಮುಖಂಡರ ವಿರುದ್ಧದ ಪ್ರತಿರೋಧವಾಗಿತ್ತು. ಅಂದರೆ ಧರ್ಮವನ್ನು ಬೋಧಿಸುವ ಧಾರ್ಮಿಕ ಮುಖಂಡರಿಗೇನು ಗೊತ್ತು?ಬೆಂಕಿಯೊಳಗೆ ಬೇಯುವ ಕಷ್ಟ ಎನ್ನುವಂತಿದೆ.

ರೋಗಗ್ರಸ್ತ ಹೆಂಡತಿ ತನ್ನ ಬಳಿ ಸುಳಿಯದೇ ಇದ್ದಾಗ ಪಾಷಾನ ಮನಸ್ಸು ಕುರಾನ್ ಹೇಳಿದ ನಾಲ್ಕು ಹೆಂಡತಿಯರನ್ನು ಇಟ್ಟುಕೊಳ್ಳಬಹುದೆಂಬುದನ್ನು ನೆನಪಿಸಿಕೊಳ್ಳುತ್ತದೆ. ಅಲ್ಲದೆ ಮಹಮ್ಮದ್ ಪೈಗಂಬರರು ತನ್ನಂತಹವನಿಗಾಗಿಯೇ ಆ ರೀತಿ ಹೇಳಿರಬೇಕೆಂದು ಯೋಚಿಸುವುದು ಧರ್ಮದೊಳಗಿನ ಆ ಹುಳುಕೇ ಆಗಿದೆ.ಹೆಂಡತಿ ರೋಗಿಯಾದರೆ ಗಂಡನಿಗೆ ಹೆಣ್ಣು ಬೇಡವೇ? ಎಂದು ಯೋಚಿಸುವ ಪುರುಷ ಮನಸ್ಸು ಕಾಣಿಸುತ್ತದೆಯೇ ಹೊರತು ಹೆಂಡತಿಯನ್ನು ಸರಿಯಾಗಿ ಆರೈಕೆ ಮಾಡಬೇಕೆಂಬ ಮಾನವೀಯ ಮನಸ್ಸು ಎಲ್ಲೂ ಕಾಣಿಸುವುದಿಲ್ಲ. ತಾಯಿ ಮನೆಯಲ್ಲಿ ಪುನರ್ಜನ್ಮ ಪಡೆದ ನಸೀಮಾಳನ್ನು ಮೂರು ವರ್ಷ ಕಳೆದು ಪತಿ ಮರಳಿ ಮನೆಗೆ ಬರುವಂತೆ ಒತ್ತಾಯಿಸಿದಾಗ ಆಕೆ ನೀವು ಮಾಡಿದಂತೆ ನಾನು ಮಾಡಿದ್ದರೆ

ಹೇಗಿರುತ್ತಿತ್ತೆಂದು ನೀವು ಯೋಚಿಸಿದ್ದೀರಾ ಎಂಬ ಪ್ರಶ್ನೆಯನ್ನು ಮುಂದಿಟ್ಟಾಗ "ನೀನು ಹೆಣ್ಣು.ಗಂಡಸರು ನಾಲ್ಕು ಜನ ಹೆಂಡತಿಯರ ನ್ನಿಟ್ಟುಕೊಳ್ಳಬಹುದೆಂದು ಕುರಾನ್ ಬೋಧಿಸುತ್ತದೆಯೇ ಹೊರತು ಹೆಂಗಸರು ಹಾಗೆ ಮಾಡಬಹುದೆಂದು ಕುರಾನ್ ಹೇಳಿಲ್ಲವಲ್ಲ?"(ಸಾರಾ ಅಬೂಬಕರ್ ,೧೯೮೫,ಪುಟ ೧೬೬) ಎನ್ನುವಲ್ಲಿ ಧಾರ್ಮಿಕ ಚೌಕಟ್ಟಿನೊಳಗಡೆ ಹೆಣ್ಣ ನ್ನು ಹೇಗೆಲ್ಲಾ ಶೋಷಿಸುತ್ತಾರೆಂಬುದನ್ನು ಗುರುತಿಸಬಹುದು.

ಕಾದಂಬರಿಯ ಕೊನೆಗಾಗುವಾಗ ಜೀವನದುದ್ದಕ್ಕೂ ನೋವನ್ನೇ ಉಂಡ ನಸೀಮಾ ಇಡೀ ವ್ಯವಸ್ಥೆಯ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುವುದನ್ನು ಗಮನಿಸಬಹುದು." ರೋಗಿಯಾದ ಹೆಂಡತಿಯನ್ನು ಹೊರಗೆ ಎಸೆದು ಬಿಡಬೇಕೆಂದು ಕುರಾನ್ ಬೋಧಿಸುತ್ತದೆ ಯೇ?"(ಸಾರಾ ಅಬೂಬಕ್ಕರ್ ,೧೯೮೫,ಪುಟ ೧೬೬) ಎನ್ನುವ ಪ್ರಶ್ನೆ ಧಾರ್ಮಿಕ ವ್ಯವಸ್ಥೆ ಮೂಲಕ ಶೋಷಣೆಗೊಳಗಾಗಿರುವ ಹೆಣ್ಣಿನ ಧ್ವನಿಯಾಗಿ ಕಾಣಿಸಿಕೊಳ್ಳುತ್ತದೆ.

**ವೃತ್ತಿ :** ಸಾರಾ ಅವರ ಕೃತಿಗಳು ಸಾಮಾನ್ಯವಾಗಿ ಮುಸ್ಲಿಂ ಸಮುದಾಯದ ಕೆಳವರ್ಗದ ಜನರ ಬದುಕನ್ನೇ ಹೆಚ್ಚು ಕೇಂದ್ರೀಕರಿಸಿರುವುದರಿಂದ ಅವರ ಕಾದಂಬರಿಯ ಪಾತ್ರಗಳೆಲ್ಲವೂ ಹೆಚ್ಚಿನ ಶಿಕ್ಷಣಕ್ಕೆ ತೆರೆದುಕೊಂಡಂತದ್ದಲ್ಲ. ಧಾರ್ಮಿಕ ಶಿಕ್ಷಣವನ್ನು ಅಲ್ಪಸ್ವಲ್ಪ ಪಡೆದ ಜನಸಮೂಹವೇ ಹೆಚ್ಚಾಗಿ ಕಾಣಿಸಿಕೊಳ್ಳುವುದರಿಂದ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಬೇಕಾದ ಅಲ್ಪ ಸ್ವಲ್ಪ ಆರ್ಥಿಕತೆಯನ್ನು ಹೊಂದಿದ ಲಘು ಕೆಲಸಗಳನ್ನೇ ಆಯ್ದುಕೊಳ್ಳುವುದನ್ನು ಕಾದಂಬರಿಯೊಳಗೆ ಗುರುತಿಸಬಹುದು. ಇಲ್ಲಿ ಬರುವ ಗಂಡು ಪಾತ್ರಗಳೆಲ್ಲಾ ಸಾಮಾನ್ಯವಾಗಿ ಸೋಮಾರಿತನವನ್ನು ಮೈಗೂಡಿಸಿಕೊಂಡ ಮತ್ತು ಮಹಿಳೆಯರು ದುಡಿದದ ರಲ್ಲೇ ಕುಳಿತು ತಿನ್ನುವ ಪ್ರವೃತ್ತಿಯನ್ನು ನಾವು ಸಕೀನಾಳ ಅಣ್ಣ ಮತ್ತು ಜುಲೇಕನ ಮಗನ ಪಾತ್ರಗಳಲ್ಲಿ ಗುರುತಿಸಬಹುದು. ಸಾಮಾನ್ಯ ಗುಡಿಸಲುಗಳನ್ನು ಹೊಂದಿದ ಬಡ ಕುಟುಂಬಗಳು ಅಲ್ಲಲ್ಲಿ ಆಡುಗಳನ್ನು ಸಾಕಿಕೊಂಡು, ಕೋಳಿಗಳನ್ನು ಸಾಕಿಕೊಂಡು, ಬದುಕನ್ನು ಕಟ್ಟುವ ಕಾರ್ಯದಲ್ಲಿ ನಿರತರಾಗಿರುವುದನ್ನು ಕಾದಂಬರಿಯೊಳಗೆ ಗುರುತಿಸಬಹುದು. ಇನ್ನು ಅನೇಕ ಕುಟುಂಬಗಳಲ್ಲಿ ಗಂಡ ಬಿಟ್ಟು ಹೋದ ಮಹಿಳೆಯರು ಮನೆಯೊಳಗೆ ಕುಳಿತುಕೊಳ್ಳದೆ ತಮ್ಮ ಮಕ್ಕಳ ಜವಾಬ್ದಾರಿಯನ್ನು ತಾವೇ ಹೊತ್ತುಕೊಂಡು ಶ್ರೀಮಂತರ ಮನೆಗೆ ಅಡುಗೆ ಮತ್ತು ಬಾಣಂತನ ಮಾಡಿಸುವ ಕೆಲಸವನ್ನುಸಕೀನಾ ನಿರ್ವಹಿಸುವುದನ್ನು ಕಾದಂಬರಿಯಲ್ಲಿ ಗುರ್ತಿಸಬಹುದು. ಮುಸ್ಲಿಂ ಬಡ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಮದುವೆಗಾಗಿ ಮೊದಲೇ ಹಣವನ್ನು ಕೂಡಿರಬೇಕಾಗಿರುವುದರಿಂದ ಅವರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡದೆ ಬೀಡಿ ಕಟ್ಟುವ ಕೆಲಸವನ್ನು ತಮ್ಮ ಮನೆಯ ಆದಾಯದ ಮೂಲವಾಗಿ ಗುರುತಿಸಿಕೊಳ್ಳುವುದನ್ನು ನಸೀಮಾಳ ಪಾತ್ರದ ಮೂಲಕ ಕಾಣಬಹುದು. ಗಂಡು ಮಕ್ಕಳು ಹದಿನಾಲ್ಕು ವರ್ಷದ ವರೆಗೂ ಹೊರಗಡೆ ಆಟ ಆಡಿಕೊಂಡು ಸಮಯ ವ್ಯರ್ಥ ಮಾಡಿದರೆ, ಹೆಣ್ಣು ಮಕ್ಕಳು ಹದಿಮೂರು ವರ್ಷವಾ ಗುವಾಗಲೇ ಮದುವೆ ಮಾಡಿಕೊಂಡು, ಮಕ್ಕಳನ್ನು ಹಡೆದುಕೊಂಡು, ಬೀಡಿ ಕಟ್ಟಿಕೊಂಡು ಮನೆಯವರೆಲ್ಲರ ಬೇಕು ಬೇಡಗಳಿಗೆ ಸ್ಪಂದಿಸುವಂತವರಾಗಬೇಕಿತ್ತು. ನಸೀಮಾಳ ಗಂಡ ಪಾಷಾ ಮಾತ್ರ ತನ್ನ ತಂದೆ ಮಾಡುತ್ತಿದ್ದ ಮರಗಳನ್ನು ಸಾಗಿಸುವ ಲಾರಿಯ ಡ್ರೈವರ್ ಕೆಲಸವನ್ನೇ ಗಿಟ್ಟಿಸಿಕೊಂಡಿದ್ದ. ಆದರೆ ವರಮಾನವಂತೂ ಒಂದು ಕುಟುಂಬದ ಪಾಲನೆ ಪೋಷಣೆಗೆ ಸಾಕಾಗುವಷ್ಟಿರಲಿಲ್ಲ. ಈ ಕಾದಂಬರಿಯಲ್ಲಿ ಬರುವ ಗಂಡಿನ ವೃತ್ತಿಗಿಂತ ಹೆಣ್ಣಿನ ವೃತ್ತಿಗಳೆಲ್ಲವೂ ಹೆಚ್ಚು ಜವಾಬ್ದಾರಿಯುತವಾಗಿದ್ದು, ಮನೆಗೆ ಆಧಾರವಾಗಿತ್ತು.

ಒಟ್ಟಿನಲ್ಲಿ ಸಾರ ಅವರ 'ಸಹನಾ'ಕಾದಂಬರಿ ಸಂಸ್ಕೃತಿಯ ಸಂರಚನೆಗಳು ಹೊಸರೂಪದಲ್ಲಿ ತೆರೆದುಕೊಳ್ಳುವುದನ್ನು ಗುರುತಿಸಬಹುದು. ಮುಸ್ಲಿಂ ಸಂವೇದನೆಯುಳ್ಳ ಹೆಣ್ಣಿನ ಧ್ವನಿ ಸಮಾಜದ ಗಮನ ಸೆಳೆಯದಾಗ ಬದಲಾವಣೆಗೆ ಒಳಗಾಗಬಹುದೇನೋ ಎಂಬ ಆಶಯವನ್ನು ಹೊತ್ತು ನಿಂತಿದೆ. ಜಡ್ದುಹಿಡಿದ ಪುರುಷ ಸಮಾಜ ವ್ಯವಸ್ಥೆಗೊಂದು ಅರಿವಿನ ಬೆಳಕನ್ನು ಹಚ್ಚುವ ಕೆಲಸ ಮಾಡಲು ಪ್ರಯತ್ನಿಸಿದೆ. ಎಲ್ಲಾ ರೀತಿಯ ಹಿಂಸೆ,ದೌರ್ಜನ್ಯಗಳು ಕೊನೆಗೊಂಡು ಜಗತ್ತಿನಾದ್ಯಂತ ಶಾಂತಿ ನೆಲೆಸಲಿ ವಿಶ್ವ ಶಾಂತಿಯೇ ನಮ್ಮೆಲ್ಲರ ಗುರಿಯಾಗಲಿ ಎಂಬುದೇ ಕಾದಂಬರಿಗಾರ್ತಿಯ ಆಶಯ ಎನ್ನಬಹುದು.

## ಪರಾಮರ್ಶನ ಕೃತಿಗಳು

1. ಕೇಶವಶರ್ಮ. ಕೆ, ೨೦೦೪, ದಲಿತ ಬಂಡಾಯ

ಕಾದಂಬರಿಗಳಲ್ಲಿ ಶ್ರಮ ಸಂಸ್ಕೃತಿಯ ಎಚ್ಚರ ಹಾಗೂ ಪರ್ಯಾಯಗಳ ಹುಡುಕಾಟ, ಕನ್ನಡ ವಿ.ವಿ, ಹಂಪಿ.

2. ತರೀಕೆರೆ ರಹಮತ್, ೨೦೦೪, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ ರಸ್ತೆ ಬೆಂಗಳೂರು.
3. ದಳವಾಯಿ ಕೆ.ಟಿ,೨೦೦೬,ಕಥೆ- ಕಾದಂಬರಿಗಳಲ್ಲಿ ಮುಸ್ಲಿಂ ಮಹಿಳಾ ಸಂವೇದನೆ, ಕರ್ನಾಟಕ ವಿ.ವಿ ಧಾರವಾಡ.
4. ಸಾರಾ ಅಬೂಬಕ್ಕರ್, ೧೯೮೫, ಸಹನಾ, ಚಂದ್ರಗಿರಿ ಪ್ರಕಾಶನ, ಮೈಕ್ರೋವೇನ್ ಸ್ಟೇಷನ್ ರಸ್ತೆ ಮಂಗಳೂರು